# ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ; ಕುದೇರು

ಸಂಖ್ಯೆ:170:ಆಡಳಿತ:2018 ದಿನಾಂಕ:20.02.2019

## ನೇಮಕಾತಿ ಪ್ರಕಟಣೆ

ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಕುದೇರು ಇದರಲ್ಲಿ ಖಾಲಿ ಇರುವ ವಿವಿಧ ವೃಂದಗಳಲ್ಲಿನ ಒಟ್ಟು 72 ಹುದ್ದೆಗಳನ್ನು ನಿಗದಿಪಡಿಸಿರುವ ಮೀಸಲಾತಿ ವರ್ಗೀಕರಣದನ್ವಯ ನೇರ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು **ಆನ್‌ಲೈನ್** (**ON-LINE)** ಮೂಲಕ ಆಹ್ವಾನಿಸಲಾಗಿದೆ. ಖುದ್ದಾಗಿ / ಅಂಚೆ / ಕೊರಿಯರ್/ಪ್ರತ್ಯೇಕವಾಗಿ ಅರ್ಜಿ ಕಳುಹಿಸಲು ಅವಕಾಶ ಇರುವುದಿಲ್ಲ. ಖುದ್ದಾಗಿ/ಅಂಚೆ/ಪ್ರತ್ಯೇಕವಾಗಿ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದೆಂದು ಈ ಮೂಲಕ ಸ್ಪಷ್ಟಪಡಿಸಿದೆ. ಸರ್ಕಾರದ ಆದೇಶ ಸಂಖ್ಯೆ:ಸಿಒ 72 2018 ಸಿಸಿಬಿ ರ ದಿನಾಂಕ:29.01.2019 ಹಾಗು ದಿನಾಂಕ: 31.01.2019 ರಲ್ಲಿ ಅನುಮೋದಿಸಿದಂತೆ ನೇರ ನೇಮಕಾತಿಗೆ ಪರಿಗಣಿಸಲಾಗಿರುವ ಹುದ್ದೆಗಳ ವಿವರ.

| ಕ್ರ ಸಂ. | ಹುದ್ದೆಯ ಹೆಸರು | ವೇತನಶ್ರೇಣಿ | ಒಟ್ಟು ಹುದ್ದೆಗಳು | ವರ್ಗಗಳ ವಿವರ | ಒಳ ಮೀಸಲಾತಿ | | | | | | ಒಟ್ಟು ಹುದ್ದೆ |
|---|---|---|---|---|---|---|---|---|---|---|---|
| | | | | | ಇ | ಮ | ಗ್ರಾ | ಅಂ ವಿ | ಮಾ.ಸೈ | ಕ.ಮಾ.ಅ | |
| 1 | ಸಹಾಯಕ ವ್ಯವಸ್ಥಾಪಕರು (ಎ.ಹೆಚ್. & ಎ.ಐ) | 52650–97100 | 06 | ಪ.ಜಾ | 01 | – | – | – | – | – | 01 |
| | | | | ಪ.ಪಂ. | 01 | – | – | – | – | – | 01 |
| | | | | ಪ್ರ–1 | 01 | – | – | – | – | – | 01 |
| | | | | ಪ್ರ–2ಎ | 01 | – | – | – | – | – | 01 |
| | | | | ಸಾ.ಅ | – | 01 | – | 01 | – | – | 02 |
| 2 | ಸಹಾಯಕ ವ್ಯವಸ್ಥಾಪಕರು (ವಿತ್ತ) | 52650–97100 | 01 | ಸಾ.ಅ. | – | – | 01 | – | – | – | 01 |
| 3 | ಸಹಾಯಕ ವ್ಯವಸ್ಥಾಪಕರು (ಅಭಿಯಂತರ ) | 52650–97100 | 01 | ಸಾ.ಅ. | 01 | – | – | – | – | – | 01 |
| 4 | ತಾಂತ್ರಿಕ ಅಧಿಕಾರಿ (ಡಿ.ಟಿ) | 43100–83900 | 03 | ಪ.ಜಾ | 01 | – | – | – | – | – | 01 |
| | | | | ಪ.ಪಂ. | 01 | – | – | – | – | – | 01 |
| | | | | ಸಾ.ಅ | – | – | – | 01 | – | – | 01 |
| 5 | ಉಗ್ರಾಣಾಧಿಕಾರಿ | 43100–83900 | 01 | ಸಾ.ಅ. | – | 01 | – | – | – | – | 01 |
| 6 | ಕೃಷಿ ಅಧಿಕಾರಿ | 43100–83900 | 02 | ಪ್ರ–1 | 01 | – | – | – | – | – | 01 |
| | | | | ಪ್ರ–2ಎ | 01 | – | – | – | – | – | 01 |
| 7 | ಆಡಳಿತಾಧಿಕಾರಿ / ಕಾರ್ಮಿಕಾಧಿಕಾರಿ/ ಸಾರ್ವಜನಿಕ ಸಂಪರ್ಕ ಅಧಿಕಾರಿ / ಕೈಗಾರಿಕ ಸಂಪರ್ಕ ಅಧಿಕಾರಿ | 43100–83900 | 01 | ಸಾ.ಅ. | – | 01 | – | – | – | – | 01 |
| 8 | ತಾಂತ್ರಿಕ ಅಧಿಕಾರಿ (ಗು.ನಿ) | 43100–83900 | 02 | ಪ.ಜಾ | – | 01 | – | – | – | – | 01 |
| | | | | ಪ್ರ–2ಬಿ | 01 | – | – | – | – | – | 01 |
| 9 | ಎಂ.ಐ.ಎಸ್ / ಸಿಸ್ಟಂ ಆಫೀಸರ್ | 43100–83900 | 01 | ಸಾ.ಅ. | – | – | 01 | – | – | – | 01 |
| 10 | ತಾಂತ್ರಿಕ ಅಧಿಕಾರಿ (ಇಂಜಿ) | 43100–83900 | **MECHANICAL ENGINEERING** 01 ಹುದ್ದೆ | ಸಾ.ಅ | 01 | – | – | – | – | – | 01 |
| | | | **Electronics & Communication** 01 ಹುದ್ದೆ | ಸಾ.ಅ | – | – | 01 | – | – | – | 01 |

downloaded from: www.kpscvaani.com

| ಕ್ರ. ಸಂ. | ಹುದ್ದೆಯ ಹೆಸರು | ವೇತನಶ್ರೇಣಿ | ಒಟ್ಟು ಹುದ್ದೆಗಳು | ವರ್ಗಗಳ ವಿವರ | ಒಳ ಮೀಸಲಾತಿ | | | | | | ಒಟ್ಟು ಹುದ್ದೆ |
|---|---|---|---|---|---|---|---|---|---|---|---|
| | | | | | ಇ | ಮ | ಗ್ರಾ | ಅಂವಿ | ಮಾ.ಸೈ | ಕ.ಮಾ.ಅ | |
| 11 | ವಿಸ್ತರಣಾಧಿಕಾರಿ ದರ್ಜೆ–3 | 33450–62600 | ಒಳಸೇವಾ ಅಭ್ಯರ್ಥಿಗಳಿಗೆ 01 ಹುದ್ದೆ | ಪ.ಜಾ | 01 | – | – | – | – | – | 01 |
| | | | **General public /** ಇತರೆ ಅಭ್ಯರ್ಥಿಗಳಿಗೆ 06 ಹುದ್ದೆ | ಪ.ಜಾ | – | 01 | – | – | – | – | 01 |
| | | | | ಪ.ಪಂ. | 01 | – | – | – | – | – | 01 |
| | | | | ಪ್ರ–1 | 01 | – | – | – | – | – | 01 |
| | | | | ಪ್ರ–2ಎ | 01 | – | – | – | – | – | 01 |
| | | | | ಸಾ.ಅ | – | 01 | – | – | – | – | 01 |
| | | | | ಸಾ.ಅ. | – | – | – | 01 | – | – | 01 |
| | | | ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘದ ಅಭ್ಯರ್ಥಿಗಳಿಗೆ 01 ಹುದ್ದೆ | ಸಾ.ಅ | 01 | – | – | – | – | – | 01 |
| 12 | ಸೆಕ್ಯುರಿಟಿ ಸೂಪರ್‌ವೈಸರ್ | 33450–62200 | 01 | ಸಾ.ಅ | – | – | 01 | – | – | – | 01 |
| 13 | ಭದ್ರತಾ ರಕ್ಷಕರು / ಕೋ ಆರ್ಡಿನೇಟರ್ ಪ್ರೊಟೇಕ್ಷನ್ ದರ್ಜೆ–2 | 27650–52650 | 05 | ಪ.ಜಾ | 01 | – | – | – | – | – | 01 |
| | | | | ಪ.ಪಂ | 01 | – | – | – | – | – | 01 |
| | | | | ಪ್ರ–2(ಎ) | – | – | 01 | – | – | – | 01 |
| | | | | ಸಾ.ಅ | – | – | 01 | – | – | – | 01 |
| | | | | ಸಾ.ಅ | – | – | – | – | 01 | – | 01 |
| 14 | ಕೆಮಿಸ್ಟ್ ದರ್ಜೆ–2 | 27650–52650 | 04 | ಪ.ಜಾ | – | 01 | – | – | – | – | 01 |
| | | | | ಪ.ಜಾ | – | – | 01 | – | – | – | 01 |
| | | | | ಸಾ.ಅ | – | 01 | – | – | – | – | 01 |
| | | | | ಸಾ.ಅ | 01 | – | – | – | – | – | 01 |
| 15 | ಆಡಳಿತ ಸಹಾಯಕ ದರ್ಜೆ–2 | 27650–52650 | 03 | ಪ್ರ–3(ಬಿ) | 01 | – | – | – | – | – | 01 |
| | | | | ಪ್ರ–2(ಎ) | – | 01 | – | – | – | – | 01 |

downloaded from: www.kpscvaani.com

| ಕ್ರ. ಸಂ. | ಹುದ್ದೆಯ ಹೆಸರು | ವೇತನಶ್ರೇಣಿ | ಒಟ್ಟು ಹುದ್ದೆಗಳು | ವರ್ಗಗಳ ವಿವರ | ಒಳ ಮೀಸಲಾತಿ | | | | | | ಒಟ್ಟು ಹುದ್ದೆ |
|---|---|---|---|---|---|---|---|---|---|---|---|
| | | | | | ಇ | ಮ | ಗ್ರಾ | ಅಂವಿ | ಮಾ.ಸೈ | ಕ.ಮಾ.ಅ | |
| | | | | ಸಾ.ಅ | – | 01 | – | – | – | – | 01 |
| 16 | ಲೆಕ್ಕ ಸಹಾಯಕ ದರ್ಜೆ–2 | 27650–52650 | 04 | ಪ್ರ.(1) | 01 | – | – | – | – | – | 01 |
| | | | | ಪ್ರ.–2(ಎ) | 01 | – | – | – | – | – | 01 |
| | | | | ಸಾ.ಅ | – | 01 | – | – | – | – | 01 |
| | | | | ಸಾ.ಅ | – | – | 01 | – | – | – | 01 |
| 17 | ಜೂನಿಯರ್ ಸಿಸ್ಟಂ ಅಪರೇಟರ್ | 27650–52650 | 03 | ಪ್ರ.–3(ಎ) | 01 | – | – | – | – | – | 01 |
| | | | | ಸಾ.ಅ | 01 | – | – | – | – | – | 01 |
| | | | | ಸಾ.ಅ | – | – | – | 01 | – | – | 01 |
| 18 | ಮಾರುಕಟ್ಟೆ ಸಹಾಯಕ ದರ್ಜೆ–2 | 27650–52650 | 02 | ಪ್ರ.–2(ಬಿ) | 01 | – | – | – | – | – | 01 |
| | | | | ಸಾ.ಅ | – | – | 01 | – | – | – | 01 |
| 19 | ಕಿರಿಯ ತಾಂತ್ರಿಕರು / ಜೂನಿಯರ್ ಟೆಕ್ನಿಷಿಯನ್ / ಬಾಯ್ಲರ್ ಅಟೆಂಡೆಂಟ್ | 21400–42000 | **Fitter** 02 ಹುದ್ದೆ | ಪ.ಪಂ | 01 | – | – | – | – | – | 01 |
| | | | | ಪ.ಜಾ | – | – | 01 | – | – | – | 01 |
| | | | **Turner** 01 ಹುದ್ದೆ | ಪ್ರ.(1) | 01 | – | – | – | – | – | 01 |
| | | | **Welder** 01 ಹುದ್ದೆ | ಪ್ರ.–2(ಎ) | 01 | – | – | – | – | – | 01 |
| | | | **Refrigeration** 04 ಹುದ್ದೆ | ಪ.ಜಾ | 01 | – | – | – | – | – | 01 |
| | | | | ಪ್ರ.–2(ಎ) | – | – | 01 | – | – | – | 01 |
| | | | | ಸಾ.ಅ | 01 | – | – | – | – | – | 01 |
| | | | | ಸಾ.ಅ | – | – | – | 01 | – | – | 01 |
| | | | **Electronic Mechanic** 01ಹುದ್ದೆ | ಸಾ.ಅ | 01 | – | – | – | – | – | 01 |
| | | | **Instrument Mechanic** **02 ಹುದ್ದೆ** | ಸಾ.ಅ | – | 01 | – | – | – | – | 01 |
| | | | | ಸಾ.ಅ | – | – | 01 | – | – | – | 01 |

downloaded from: www.kpscvaani.com

| ಕ್ರ. ಸಂ. | ಹುದ್ದೆಯ ಹೆಸರು | ವೇತನಶ್ರೇಣಿ | ಒಟ್ಟು ಹುದ್ದೆಗಳು | ವರ್ಗಗಳ ವಿವರ | ಒಳ ಮೀಸಲಾತಿ | | | | | | ಒಟ್ಟು ಹುದ್ದೆ |
|---|---|---|---|---|---|---|---|---|---|---|---|
| | | | | | ಇ | ಮ | ಗ್ರಾ | ಅಂ ವಿ | ಮಾ.ಸೈ | ಕ.ಮಾ.ಅ | |
| | | | **Electrical & Electricals 03 ಹುದ್ದೆ** | ಪ್ರ–2(ಬಿ) | 01 | – | – | – | – | – | 01 |
| | | | | ಸಾ.ಅ | – | 01 | – | – | – | – | 01 |
| | | | | ಸಾ.ಅ | – | – | – | – | 01 | – | 01 |
| | | | **Electronic Or Electronics 03 ಹುದ್ದೆ** | ಸಾ.ಅ | – | 01 | – | – | – | – | 01 |
| | | | | ಸಾ.ಅ | 01 | – | – | – | – | – | 01 |
| | | | | ಪ್ರ–2(ಎ) | – | 01 | – | – | – | – | 01 |
| | | | **Boiler Attendant Certificate Grade-2 03 ಹುದ್ದೆ** | ಪ್ರ–3(ಬಿ) | 01 | – | – | – | – | – | 01 |
| | | | | ಸಾ.ಅ | – | – | 01 | – | – | – | 01 |
| | | | | ಪ.ಜಾ | – | 01 | – | – | – | – | 01 |
| 20 | ಚಾಲಕರು | 21400–42000 | **02** | ಸಾ.ಅ | – | – | 01 | – | – | – | 01 |
| | | | | ಪ್ರ–3(ಎ) | 01 | – | – | – | – | – | 01 |

ಅರ್ಜಿಯಲ್ಲಿ ಮೀಸಲಾತಿಗೆ ಸಂಬಂಧಿಸಿದ ಅಂಕಣದಲ್ಲಿ ಉಪಯೋಗಿಸಿದ ಪದಗಳ ಅರ್ಥವನ್ನು ಈ ಕೆಳಕಂಡಂತೆ ಅರ್ಥೈಸಿಕೊಳ್ಳಬೇಕು :

| | |
|---|---|
| ಸಾ.ಅ. | ಸಾಮಾನ್ಯ ಅಭ್ಯರ್ಥಿ |
| ಪ.ಜಾ. | ಪರಿಶಿಷ್ಟ ಜಾತಿ |
| ಪ.ಪಂ. | ಪರಿಶಿಷ್ಟ ಪಂಗಡ |
| ಪ್ರ–2ಎ | ಪ್ರವರ್ಗ 2ಎ |
| ಪ್ರ–2ಬಿ | ಪ್ರವರ್ಗ 2ಬಿ |
| ಪ್ರ–3ಎ | ಪ್ರವರ್ಗ 3ಎ |
| ಪ್ರ–3ಬಿ | ಪ್ರವರ್ಗ 3ಬಿ |

| | |
|---|---|
| ಮಾ.ಸೈ. | ಮಾಜಿ ಸೈನಿಕರು |
| ಗ್ರಾ | ಗ್ರಾಮೀಣ ಅಭ್ಯರ್ಥಿ |
| ಅಂ.ವಿ. | ಅಂಗವಿಕಲರು |
| ಮಹಿಳಾ | ಮಹಿಳಾ ಅಭ್ಯರ್ಥಿ |
| ಕ.ಮಾ.ಅ | ಕನ್ನಡ ಮಾಧ್ಯಮದಲ್ಲಿ ಅಧ್ಯಯನ |
| | |
| | |

ಪ್ರವರ್ಗ ಮೇಲಿನಂತೆ ಮೀಸಲಿಟ್ಟ ರಿಕ್ತ ಸ್ಥಾನಗಳಿಗೆ ಸೂಕ್ತ ಮಹಿಳಾ/ಗ್ರಾಮೀಣ/ಮಾಜಿ ಸೈನಿಕ/ಅಂಗವಿಕಲ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಅಂತಹ ಹುದ್ದೆಗಳನ್ನು ಆಯಾ ವರ್ಗಗಳ ಸಾಮಾನ್ಯ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.

- ಒಕ್ಕೂಟವು ಖಾಲಿ ಇರುವ ಈ ಮೇಲಿನ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ನೇಮಕಾತಿ ಪ್ರಕ್ರಿಯೆಯ ಪೂರ್ಣ ವಿವರಗಳನ್ನು ಒಕ್ಕೂಟದ ಜಾಲ ತಾಣದಿಂದ(WEBSITE) chamul.co.in ಪಡೆದ ಅರ್ಜಿಗಳನ್ನು ತಾಕ್ಷಣಿಕ ಸೇವೆಯ (ONLINE) ಮೂಲಕವೇ ಸಲ್ಲಿಸತಕ್ಕದ್ದು.

downloaded from: www.kpscvaani.com

- ಅಭ್ಯರ್ಥಿಗಳು ಭಾರತೀಯ ನಾಗರೀಕನಾಗಿರತಕ್ಕದ್ದು;
- ಕಾರಣಾಂತರಗಳಿಂದ ಈ ನೇಮಕಾತಿಯು ರದ್ದಾದಲ್ಲಿ, ಅರ್ಜಿ ಶುಲ್ಕವನ್ನು ವಾಪಸ್ಸು ಮಾಡಲಾಗುವುದಿಲ್ಲ.
- ಈ ಪ್ರಕಟಣೆಯಲ್ಲಿ ಪ್ರಕಟಿಸಲಾಗಿರುವ ಹುದ್ದೆಗಳ ಸಂಖ್ಯೆಯಲ್ಲಿ ಬದಲಾವಣೆ (ಹೆಚ್ಚು/ಕಡಿಮೆ) ಮಾಡುವ ಹಕ್ಕನ್ನು ಸಕ್ಷಮ ಪ್ರಾಧಿಕಾರವು ಹೊಂದಿರುತ್ತದೆ.
- ಅಭ್ಯರ್ಥಿಗಳು ಒಂದು ಹುದ್ದೆಗೆ ಒಂದೇ ಅರ್ಜಿ ಸಲ್ಲಿಸತಕ್ಕದ್ದು. ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ಯಾವುದೇ ಮುನ್ಸೂಚನೆಯಿಲ್ಲದೇ ತಿರಸ್ಕರಿಸಲಾಗುವುದು.
- ಅರ್ಜಿ ನಮೂನೆಯನ್ನು ಒಕ್ಕೂಟದ ಜಾಲತಾಣದ ಮೂಲಕ ಡೌನ್‌ಲೋಡ್ ಮಾಡಿಕೊಂಡು ಮುದ್ರಿಸಿ ಅಂಚೆ ಅಥವಾ ಇನ್ನಿತರೆ ಮಾಧ್ಯಮಗಳ ಮೂಲಕ ಸಲ್ಲಿಸಿದಲ್ಲಿ ಅವುಗಳನ್ನು ಗಣನೆಗೆ ತೆಗೆದುಕೊಳ್ಳದೆ ತಿರಸ್ಕರಿಸಲಾಗುವುದು.
- ಅಭ್ಯರ್ಥಿಗಳು ಅರ್ಜಿಗಳಲ್ಲಿ ಅಪೂರ್ಣ ಮಾಹಿತಿಗಳನ್ನು ನೀಡಿದ್ದಲ್ಲಿ ಅಂತಹ ಅರ್ಜಿಗಳನ್ನು ಗಣನೆಗೆ ತೆಗೆದುಕೊಳ್ಳದೆ ತಿರಸ್ಕರಿಸಲಾಗುವುದು.
- ಒಕ್ಕೂಟದ ಸೂಚನೆಗಳನ್ನು ಅರಿಯದೆ ತಪ್ಪೆಸಗಿದಲ್ಲಿ ಒಕ್ಕೂಟವು ಜವಾಬ್ದಾರರಾಗಿರುವುದಿಲ್ಲ.
- ನಿಗದಿತ ಶುಲ್ಕ ಸಂದಾಯ ಮಾಡದಿದ್ದಲ್ಲಿ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

1. **ಶೈಕ್ಷಣಿಕ ವಿದ್ಯಾರ್ಹತೆ :**

ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಸಂಬಂಧಿಸಿದ ಹುದ್ದೆಗಳಿಗೆ ಸೂಚಿಸಿರುವ ವಿದ್ಯಾರ್ಹತೆಯನ್ನು ಅಭ್ಯರ್ಥಿಗಳು ಹೊಂದಿರಲೇಬೇಕು. ಯಾವುದೇ ಹುದ್ದೆಗೆ ಸೇವಾನುಭವವನ್ನು ನಿಗದಿಪಡಿಸಿದಾಗ ಅಭ್ಯರ್ಥಿಗಳು ವಿದ್ಯಾರ್ಹತೆ ಹೊಂದಿದ ನಂತರ ಆ ಸೇವಾನುಭವ ಹೊಂದಿರತಕ್ಕದ್ದು. ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಹುದ್ದೆಗಳಿಗೆ ಅಗತ್ಯವಿರುವ ವಿದ್ಯಾರ್ಹತೆಯ ಎಲ್ಲಾ ಸೆಮಿಸ್ಟರ್ / ವರ್ಷಗಳಲ್ಲಿ ಎಲ್ಲಾ ವಿಷಯಗಳಿಗೆ (ಭಾಷೆಗಳು ಒಳಗೊಂಡಂತೆ) ನಿಗದಿಪಡಿಸಿರುವ ಗರಿಷ್ಠ ಅಂಕಗಳು ಮತ್ತು ಪಡೆದಿರುವ ಅಂಕಗಳನ್ನು ಪರಿಗಣಿಸಿ ಶೇಕಡಾವಾರು ಸರಾಸರಿ ಅಂಕಗಳನ್ನು ಸ್ಪಷ್ಟವಾಗಿ ನಮೂದಿಸುವುದು.

**ಪದವಿ ಎಂದರೆ** ಅಭ್ಯರ್ಥಿಯು 10+2 ರ ವಿದ್ಯಾಭ್ಯಾಸದ ನಂತರ ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾಗಿರುವ ಯಾವುದೇ ಅಂಗೀಕೃತ ವಿಶ್ವವಿದ್ಯಾನಿಲಯದಿಂದ ನಿಯತವಾಗಿ ಪಡೆದ ಕನಿಷ್ಟ ಮೂರು ವರ್ಷಗಳ ಅವಧಿಯ ಸಾಂಪ್ರದಾಯಿಕ ಪದವಿ (10+2+3)

**ಸ್ನಾತಕೋತ್ತರ ಪದವಿ ಎಂದರೆ** ಅಭ್ಯರ್ಥಿಯು ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯದಿಂದ ನಿಯತವಾಗಿ ಪಡೆದ ಪದವಿಯೊಂದಿಗೆ 2 ವರ್ಷ ನಿಯತವಾಗಿ ತರಗತಿಗೆ ಹಾಜರಾಗಿ ಪಡೆದ ಸಾಂಪ್ರದಾಯಿಕ ಸ್ನಾತಕೋತ್ತರ ಪದವಿ (10+2+3+2).

**ಐ.ಟಿ.ಐ. / ಬಾಯ್ಲರ್ ಅಟೆಂಡೆಂಟ್ ವಿದ್ಯಾರ್ಹತೆ ಎಂದರೆ** ಎಸ್.ಎಸ್.ಎಲ್.ಸಿ. ನಂತರ ಕರ್ನಾಟಕಉದ್ಯೋಗ ಮತ್ತು ತರಬೇತಿ ಇಲಾಖೆ / ರಾಜ್ಯ ಪರೀಕ್ಷಾ ಮಂಡಳಿಯಿಂದ / ಕರ್ನಾಟಕ ಸರ್ಕಾರ ಬಾಯ್ಲರ್ ಅಟೆಂಡೆಂಟ್ ಪರೀಕ್ಷಾ ಮಂಡಳಿಯಿಂದ ಪಡೆದ ITI ವಿದ್ಯಾರ್ಹತೆ.

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಿಂದ **ಎಸ್.ಎಸ್.ಎಲ್.ಸಿ.** ಪರೀಕ್ಷೆಯಲ್ಲಿ ಉತೀರ್ಣಗೊಂಡಿರಬೇಕು.

ಅರ್ಜಿಗಳನ್ನು ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದಂದು ಸಂಬಂದಿಸಿದ ಹುದ್ದೆಗಳಿಗೆ ಸೂಚಿಸಿರುವ ವಿದ್ಯಾರ್ಹತೆಯನ್ನು ಅಭ್ಯರ್ಥಿಗಳು ಹೊಂದಿರಲೇಬೇಕು.ಯಾವುದೇ ಹುದ್ದೆಗೆ ಸೇವಾನುಭವವನ್ನು ನಿಗಧಿಪಡಿಸಿದಾಗ ಅಭ್ಯರ್ಥಿಗಳು ವಿದ್ಯಾರ್ಹತೆ ಹೊಂದಿದ ನಂತರ ಆ ಸೇವಾನುಭವ ಹೊಂದಿರತಕ್ಕದ್ದು.ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಹುದ್ದೆಗಳಿಗೆ ಅಗತ್ಯವಿರುವ ವಿದ್ಯಾರ್ಹತೆಯ ಎಲ್ಲಾ ಸೆಮಿಸ್ಟಾರ್ / ವರ್ಷಗಳಲ್ಲಿ ಎಲ್ಲಾ ವಿಷಯಗಳಿಗೆ (ಭಾಷೆಗಳು ಒಳಗೊಂಡಂತೆ) ನಿಗಧಿಪಸಿಸಿರುವ ಗರಿಷ್ಠ ಅಂಕಗಳು ಮತ್ತು ಪಡೆದಿರುವ ಅಂಕಗಳನ್ನು ಪರಿಗಣಿಸಿ ಶೇಕಡವಾರು ಸರಾಸರಿ ಅಂಕಗಳನ್ನು / ಗ್ರೇಡ್ ಅಂಕಗಳನ್ನು ಪಡೆದ ಅಭ್ಯರ್ಥಿಗಳು ಅವರ ಗ್ರೇಡ್ ಅಂಕಗಳನ್ನು ಶೇಕಡವಾರು ಅಂಕಗಳಿಗೆ ಪರಿವರ್ತಿಸಿ ವಿಶ್ವವಿದ್ಯಾಲಯ ನೀಡಿರುವ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಶೇಕಡವಾರು ಅಂಕಗಳನ್ನು ಸ್ಪಷ್ಟವಾಗಿ ನಮೂದಿಸುವುದು.

downloaded from: www.kpscvaani.com

ಕೆಲವು ವಿಶ್ವವಿದ್ಯಾನಿಲಯಗಳು ಮೊದಲನೆ ಬಾರಿ ಗಳಿಸಿರುವ ಅಂಕಗಳನ್ನು ಮಾತ್ರ ನಮೂದಿಸಿ, ಒಂದಕ್ಕಿಂತ ಹೆಚ್ಚು ಬಾರಿ ಬರೆದು ಉತ್ತೀರ್ಣರಾಗಿರುವ ಅಂಕಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಈ ಹಿನ್ನೆಲೆಯಲ್ಲಿ ಅಭ್ಯರ್ಥಿಗಳು ಆ ಅಂಕಗಳನ್ನು ಸೇರಿಸಿಕೊಂಡು ಜೊತೆಗೆ ಗ್ರೇಸ್ ಮಾರ್ಕ್ಸ್‌ನ್ನು ನೀಡಿದಲ್ಲಿ ಅದನ್ನು ಒಟ್ಟು ಅಂಕಗಳೊಂದಿಗೆ ಸೇರಿಸಿಕೊಂಡು ಅಂಕಗಳನ್ನು ನಮೂದಿಸುವುದು ಹಾಗು ಗ್ರೇಡ್ ಅಂಕಗಳನ್ನು ಪಡೆದ ಅಭ್ಯರ್ಥಿಗಳು ಅವರ ಗ್ರೇಡ್ ಅಂಕಗಳನ್ನು ಶೇಕಡವಾರು ಅಂಕಗಳಿಗೆ ಪರಿವರ್ತಿಸಿ ವಿಶ್ವವಿದ್ಯಾಲಯ ನೀಡಿರುವ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಶೇಕಡಾವಾರು ಅಂಕಗಳನ್ನು ತಪ್ಪದೇ ನಮೂದಿಸಬೇಕು. ಅಂಕಗಳು ವ್ಯತ್ಯಾಸ ಕಂಡುಬಂದಲ್ಲಿ ಅಭ್ಯರ್ಥಿಯೇ ಜವಾಬ್ದಾರರಾಗಿರುತ್ತಾರೆ. ತಪ್ಪಿದಲ್ಲಿ ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.

ಕನ್ನಡ ಭಾಷಾ ಜ್ಞಾನ (ಓದುವುದು ಮತ್ತು ಬರೆಯುವುದು) ಕಡ್ಡಾಯವಾಗಿತ್ತದೆ.

| ಕ್ರ.ಸಂ. | ಹುದ್ದೆಗಳ ವಿವರ | ನೇಮಕಾತಿ ನಿಯಮದನ್ವಯ ಅರ್ಹತೆ |
|---|---|---|
| 1 | **ಸಹಾಯಕ ವ್ಯವಸ್ಥಾಪಕರು (ಎಹೆಚ್ & ಎಐ)<br>ವೇ.ಶ್ರೇ. ರೂ. 52650–97100<br>ಒಟ್ಟು ಹುದ್ದೆಗಳು : 06** | ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಬಿ.ವಿ.ಎಸ್ಸಿ ಮತ್ತು ಎ.ಹೆಚ್ ಪದವಿಯನ್ನು ಹೊಂದಿರಬೇಕು |
| 2 | **ಸಹಾಯಕ ವ್ಯವಸ್ಥಾಪಕರು (ವಿತ್ತ)<br>ವೇ. ಶ್ರೇ. ರೂ.52650–97100<br>ಒಟ್ಟು ಹುದ್ದೆಗಳು– 01** | ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಎಂ.ಕಾಂ (ಬಿ.ಕಾಂ ಪದವಿಯೊಂದಿಗೆ)/ ಎಂ.ಬಿ.ಎ (ಫೈನಾನ್ಸ್) (ಬಿ.ಬಿ.ಎಂ ಪದವಿಯೊಂದಿಗೆ) ಸ್ನಾತಕೋತ್ತರ ಪದವಿಯನ್ನು / ಸಿ.ಎ.ಐ.ಸಿ.ಡಬ್ಲ್ಯೂ.ಎ.ಐ ಪದವಿಯನ್ನು ಹೊಂದಿ ಕನಿಷ್ಟ ಮೂರು ವರ್ಷಗಳ ಸೇವಾನುಭವ ಹೊಂದಿರುವ ಹಾಗೂ ಗಣಕಯಂತ್ರದ ಬಳಕೆ ಹಾಗೂ ಕಂಪ್ಯೂಟರ್ ಅಪ್ಲಿಕೇಷನ್‌ಗಳ ಬಗ್ಗೆ ಜ್ಞಾನವಿರಬೇಕು. ನೇಮಕಾತಿಯಲ್ಲಿ ಸ್ನಾತಕೋತ್ತರ ಪದವಿಯ ಅಂಕಗಳನ್ನು ಪರಿಗಣಿಸಲಾಗುವುದು. |
| 3 | **ಸಹಾಯಕ ವ್ಯವಸ್ಥಾಪಕರು (ಅಭಿಯಂತರ)<br>ವೇ. ಶ್ರೇ. ರೂ.52650–97100<br>ಒಟ್ಟು ಹುದ್ದೆಗಳು– 01** | ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ M.Tech (Mechanical Engineering) ಸ್ನಾತಕೋತ್ತರ ಪದವಿಯನ್ನು ಹೊಂದಿರತಕ್ಕದ್ದು. ಡೇರಿಯಲ್ಲಿ ಕೆಲಸ ನಿರ್ವಹಿಸಿ ಸೇವಾನುಭವ ಹೊಂದಿರುವವರನ್ನು ಪರಿಗಣಿಸಲಾಗುವುದು. |
| 4 | **ತಾಂತ್ರಿಕ ಅಧಿಕಾರಿ (ಡಿ.ಟಿ)<br>ವೇ. ಶ್ರೇ. ರೂ.43100–83900<br>ಒಟ್ಟು ಹುದ್ದೆಗಳು– 03** | ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಬಿ.ಟೆಕ್ (ಡಿ.ಟೆಕ್) / ಬಿ.ಎಸ್ಸಿ (ಡಿ.ಟಿ) ಪದವಿಯನ್ನು ಹೊಂದಿರತಕ್ಕದ್ದು. |
| 5 | **ಉಗ್ರಾಣಧಿಕಾರಿ<br>ವೇ. ಶ್ರೇ. ರೂ.43100–83900<br>ಒಟ್ಟು ಹುದ್ದೆಗಳು– 01** | ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಯಾವುದೇ ಪದವಿಯನ್ನು ಹೊಂದಿದ್ದು, ಜೊತೆಗೆ P.G Diploma in Material Management ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು. |
| 6 | **ಕೃಷಿ ಅಧಿಕಾರಿ<br>ವೇ. ಶ್ರೇ. ರೂ.43100–83900<br>ಒಟ್ಟು ಹುದ್ದೆಗಳು– 02** | ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಕೃಷಿ ವಿಜ್ಞಾನದಲ್ಲಿ ಸ್ನಾತಕ ಪದವಿಯನ್ನು ಹೊಂದಿರತಕ್ಕದ್ದು ನೇಮಕಾತಿಯಲ್ಲಿ ಸ್ನಾತಕ ಪದವಿಯ ಅಂಕಗಳನ್ನು ಪರಿಗಣಿಸಲಾಗುವುದು. |
| 7 | **ಆಡಳಿತಾಧಿಕಾರಿ / ಕಾರ್ಮಿಕಾಧಿಕಾರಿ/ ಸಾರ್ವಜನಿಕ ಸಂಪರ್ಕ ಅಧಿಕಾರಿ / ಕೈಗಾರಿಕ ಸಂಪರ್ಕ ಅಧಿಕಾರಿ<br>ವೇ. ಶ್ರೇ. ರೂ.43100–83900<br>ಒಟ್ಟು ಹುದ್ದೆಗಳು– 01** | ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಎಲ್.ಎಲ್.ಎಂ (ಎಲ್.ಎಲ್.ಬಿ ಪದವಿಯೊಂದಿಗೆ) /ಎಂ.ಬಿ.ಎ (ಹೆಚ್.ಆರ್) (ಬಿ.ಬಿ.ಎಂ ಪದವಿಯೊಂದಿಗೆ) / ಎಂ.ಎಸ್.ಡಬ್ಲ್ಯೂ (ಬಿ.ಎಸ್.ಡಬ್ಲ್ಯೂ ಪದವಿಯೊಂದಿಗೆ) ಸ್ನಾತಕೋತ್ತರ ಪದವಿಯನ್ನು ಹೊಂದಿರತಕ್ಕದ್ದು. ನೇಮಕಾತಿಯಲ್ಲಿ ಸ್ನಾತಕೋತ್ತರ ಪದವಿಯ ಅಂಕಗಳನ್ನು ಪರಿಗಣಿಸಲಾಗುವುದು. |

downloaded from: www.kpscvaani.com

| | | |
|---|---|---|
| 8 | **ತಾಂತ್ರಿಕ ಅಧಿಕಾರಿ (ಗು.ನಿ)**<br>**ವೇ. ಶ್ರೇ. ರೂ.43100–83900**<br>**ಒಟ್ಟು ಹುದ್ದೆಗಳು– 02** | ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಎಂ.ಎಸ್ಸಿ ಸ್ನಾತಕೋತ್ತರ ಪದವಿ (ಕೆಮಿಸ್ಟ್ರಿ/ ಮೈಕ್ರೋ ಬಯಾಲಜಿ) ನೇಮಕಾತಿಯಲ್ಲಿ ಸ್ನಾತಕೋತ್ತರ ಪದವಿಯ ಅಂಕಗಳನ್ನು ಪರಿಗಣಿಸಲಾಗುವುದು / ಬಿ.ಟೆಕ್ (ಡಿ.ಟೆಕ್) / ಪದವಿಯನ್ನು ಹೊಂದಿರತಕ್ಕದ್ದು ನೇಮಕಾತಿಯಲ್ಲಿ ಸ್ನಾತಕ ಪದವಿಯ ಅಂಕಗಳನ್ನು ಪರಿಗಣಿಸಲಾಗುವುದು |
| 9 | **ಎಂ.ಐ.ಎಸ್ / ಸಿಸ್ಟಂ ಆಫೀಸರ್**<br>**ವೇ. ಶ್ರೇ. ರೂ.43100–83900**<br>**ಒಟ್ಟು ಹುದ್ದೆಗಳು– 01** | ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಬಿ.ಇ (ಕಂಪ್ಯೂಟರ್ ಸೈನ್ಸ್/ ಇನ್‌ಫರ್‌ಮೇಷನ್ ಸೈನ್ಸ್) ಪದವಿಯನ್ನು ಹೊಂದಿರತಕ್ಕದ್ದು. |
| 10 | **ತಾಂತ್ರಿಕ ಅಧಿಕಾರಿ (ಇಂಜಿ)**<br>**ವೇ. ಶ್ರೇ. ರೂ.43100–83900**<br>**ಒಟ್ಟು ಹುದ್ದೆಗಳು– 02** | ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಇಂಜಿನಿಯರಿಂಗ್ ಪದವಿಯನ್ನು ಹೊಂದಿರತಕ್ಕದ್ದು.<br>MECHANICAL ENGINEERING-01 ಹುದ್ದೆಗಳು<br>Electronics & Communication-01 ಹುದ್ದೆಗಳು |
| 11 | **ವಿಸ್ತರಣಾಧಿಕಾರಿ ದರ್ಜೆ–3**<br>**ವೇ. ಶ್ರೇ. ರೂ.33450–62200**<br>**ಒಟ್ಟು ಹುದ್ದೆಗಳು– 08** | **<u>ಇತರರಿಗೆ 06 ಹುದ್ದೆಗಳು</u>**<br>ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಯಾವುದೇ ಸ್ನಾತಕ / Graduate ಪದವಿಯನ್ನು ಹೊಂದಿರತಕ್ಕದ್ದು, ಸಹಕಾರ ವ್ಯವಹಾರಗಳ ಡಿಪ್ಲೋಮೊ ಪಡೆದಿರುವವರಿಗೆ ಅದ್ಯತೆ ನೀಡಲಾಗುವುದು.<br><br>**<u>ಒಳಸೇವ ಅಭ್ಯರ್ಥಿಗಳಿಗೆ 01 ಹುದ್ದೆಗಳು</u>**<br>ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಯಾವುದೇ ಸ್ನಾತಕ / Graduate ಪದವಿಯೊಂದಿಗೆ ಒಕ್ಕೂಟದಲ್ಲಿ ಕನಿಷ್ಠ 05 ವರ್ಷಗಳು ಸೇವೆ ಸಲ್ಲಿಸಿರಬೇಕು.<br><br>**<u>ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳ ಅಭ್ಯರ್ಥಿಗಳಿಗೆ 01ಹುದ್ದೆ</u>**<br>ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಯಾವುದೇ ಸ್ನಾತಕ / Graduate ಪದವಿಯೊಂದಿಗೆ ಒಕ್ಕೂಟದ ವ್ಯಾಪ್ತಿಯ ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಕನಿಷ್ಠ 05 ವರ್ಷಗಳು ಸೇವೆ ಸಲ್ಲಿಸಿರಬೇಕು. |
| 12 | **ಸೆಕ್ಯೂರಿಟಿ ಸೂಪರ್‌ವೈಸರ್ / ಸಂಯೋಜಕರು ಭದ್ರತ ದರ್ಜೆ–2**<br>**ವೇ. ಶ್ರೇ. ರೂ. 33450–62200**<br>**ಒಟ್ಟು ಹುದ್ದೆಗಳು– 01** | ಪಿ.ಯು.ಸಿ ವಿದ್ಯಾರ್ಹತೆಯೊಂದಿಗೆ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿರಬೇಕು ಹಾಗೂ ಕಂಪ್ಯೂಟರ್ ಅಪ್ಲಿಕೇಷನ್‌ಗಳ ಬಗ್ಗೆ ಜ್ಞಾನವಿರಬೇಕು. |
| 13 | **ಭದ್ರತಾ ರಕ್ಷಕರು / ಕೋ–ಅರ್ಡಿನೇಟರ್ ಪ್ರೋಟೆಷನ್ ದರ್ಜೆ–2**<br>**ವೇ. ಶ್ರೇ. ರೂ. 27650–52650**<br>**ಒಟ್ಟು ಹುದ್ದೆಗಳು– 05** | ಎಸ್.ಎಸ್.ಎಲ್.ಸಿ ವಿದ್ಯಾರ್ಹತೆಯೊಂದಿಗೆ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿರಬೇಕು |
| 14 | **ಕೆಮಿಸ್ಟ್ ದರ್ಜೆ–2**<br>**ವೇ. ಶ್ರೇ. ರೂ. 27650–52650**<br>**ಒಟ್ಟು ಹುದ್ದೆಗಳು– 04** | ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಬಿ.ಎಸ್ಸಿ(ಕೆಮಿಸ್ಟ್ರಿ) ಪದವಿಯನ್ನು ಹೊಂದಿರಬೇಕು. |

downloaded from: www.kpscvaani.com

| | | |
|---|---|---|
| 15 | **ಆಡಳಿತ ಸಹಾಯಕ ದರ್ಜೆ–2<br>ವೇ. ಶ್ರೇ. ರೂ. 27650–52650<br>ಒಟ್ಟು ಹುದ್ದೆಗಳು– 03** | ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಯಾವುದೇ ಸ್ನಾತಕ / Graduate ಪದವಿಯನ್ನು ಹೊಂದಿರಬೇಕು. ಪದವಿಯನ್ನು ಶೇ.50 ಅಂಕಗಳೊಂದಿಗೆ ಉತ್ತೀರ್ಣವಾಗಿರಬೇಕು. ಗಣಕಯಂತ್ರದ ಬಳಕೆ ಹಾಗೂ ಕಂಪ್ಯೂಟರ್ ಅಪ್ಲಿಕೇಷನ್‌ಗಳ ಬಗ್ಗೆ ಜ್ಞಾನವಿರಬೇಕು. |
| 16 | **ಲೆಕ್ಕ ಸಹಾಯಕ ದರ್ಜೆ–2<br>ವೇ. ಶ್ರೇ. ರೂ. 27650–52650<br>ಒಟ್ಟು ಹುದ್ದೆಗಳು– 04** | ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಬಿ.ಕಾಂ ಪದವಿಯನ್ನು ಹೊಂದಿರಬೇಕು. Tally Certificate Course ಪಡೆದಿರಬೇಕು. ಗಣಕಯಂತ್ರದ ಬಳಕೆ ಹಾಗೂ ಕಂಪ್ಯೂಟರ್ ಅಪ್ಲಿಕೇಷನ್‌ಗಳ ಬಗ್ಗೆ ಜ್ಞಾನವಿರಬೇಕು. |
| 17 | **ಜೂನಿಯರ್ ಸಿಸ್ಟಂ ಅಪರೇಟರ್<br>ವೇ. ಶ್ರೇ. ರೂ. 27650–52650<br>ಒಟ್ಟು ಹುದ್ದೆಗಳು– 03** | ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಬಿ.ಎಸ್ಸಿ / ಬಿ.ಸಿ.ಎ (ಕಂಪ್ಯೂಟರ್ ಸೈನ್ಸ್) ಪದವಿ ಹೊಂದಿರತಕ್ಕದ್ದು, ಸೀನಿಯರ್ ಕನ್ನಡ / ಇಂಗ್ಲೀಷ್ ಟೈಪ್‌ರೈಟಿಂಗ್ ನಲ್ಲಿ ತೇರ್ಗಡೆ ಹೊಂದಿರಬೇಕು. ಮತ್ತು ಗಣಕಯಂತ್ರದ ಬಳಕೆ ಹಾಗೂ ಕಂಪ್ಯೂಟರ್ ಅಪ್ಲಿಕೇಷನ್‌ಗಳ ಬಗ್ಗೆ ಜ್ಞಾನವಿರಬೇಕು. ಶಾರ್ಟ್ ಹ್ಯಾಂಡ್ ಮಾಡಿರಬೇಕು. |
| 18 | **ಮಾರುಕಟ್ಟೆ ಸಹಾಯಕ ದರ್ಜೆ–2<br>ವೇ. ಶ್ರೇ. ರೂ. 27650–52650<br>ಒಟ್ಟು ಹುದ್ದೆಗಳು– 02** | ಭಾರತದಲ್ಲಿ ಕಾನೂನು ರೀತ್ಯಾ ಸ್ಥಾಪಿತವಾದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಯಾವುದೇ ಬಿ.ಬಿ.ಎಂ / ಬಿ.ಬಿ.ಎ ಪದವಿಯನ್ನು ಹೊಂದಿರಬೇಕು. ಗಣಕಯಂತ್ರದ ಬಳಕೆ ಹಾಗೂ ಕಂಪ್ಯೂಟರ್ ಅಪ್ಲಿಕೇಷನ್‌ಗಳ ಬಗ್ಗೆ ಜ್ಞಾನವಿರಬೇಕು. |
| 19 | **ಕಿರಿಯ ತಾಂತ್ರಿಕರು / ಬ್ಲಾಯರ್ ಅಟೆಂಡರ್<br>ವೇತನ ಶ್ರೇಣಿ ರೂ. 21400–42000<br>ಒಟ್ಟು ಹುದ್ದೆಗಳು– 20** | ಕರ್ನಾಟಕ ಉದ್ಯೋಗ ಮತ್ತು ತರಬೇತಿ ಇಲಾಖೆ / ರಾಜ್ಯ ಪರೀಕ್ಷಾ ಮಂಡಳಿಯಿಂದ / ಕರ್ನಾಟಕ ಸರ್ಕಾರ ಬ್ಲಾಯರ್ ಅಟೆಂಡೆಂಟ್ ಪರೀಕ್ಷಾ ಮಂಡಳಿಯಿಂದ ಪಡೆದ ಐ.ಟಿ.ಐ ವಿದ್ಯಾರ್ಹತೆ / ಬ್ಲಾಯರ್ ಅಟೆಂಡೆಂಟ್ ದರ್ಜೆ–2 ಪ್ರಮಾಣ ಪತ್ರ (Certificate) ಹೊಂದಿರತಕ್ಕದ್ದು, (ಎಸ್.ಎಸ್.ಎಲ್.ಸಿ ವಿದ್ಯಾರ್ಹತೆ ಕಡ್ಡಾಯವಾಗಿ ಹೊಂದಿರಬೇಕು)<br>1. Fitter – 02 ಹುದ್ದೆಗಳು<br>2. Turner – 01 ಹುದ್ದೆಗಳು<br>3. Welder – 01 ಹುದ್ದೆಗಳು<br>4. Refrigeration –04 ಹುದ್ದೆಗಳು<br>5. Electronic Mechanic –01 ಹುದ್ದೆಗಳು<br>6. Instrument Mechanic –02 ಹುದ್ದೆಗಳು<br>7. Electrical Or Electricals –03 ಹುದ್ದೆಗಳು<br>8. Electronic Or Electronics-03 ಹುದ್ದೆಗಳು<br>9. Boiler Attendant Certificate Grade-2 –03 ಹುದ್ದೆಗಳು |
| 20 | **ಚಾಲಕರು<br>ವೇ. ಶ್ರೇ. ರೂ. 21400–42000<br>ಒಟ್ಟು ಹುದ್ದೆಗಳು– 02** | ಎಸ್.ಎಸ್.ಎಲ್.ಸಿ ವಿದ್ಯಾರ್ಹತೆಯೊಂದಿಗೆ (HMV/LMV) ವಾಹನಗಳ ಚಾಲನಾ ಪರವಾನಗಿಯನ್ನು ಹೊಂದಿ ಯಾವುದೇ ಸರ್ಕಾರಿ / ಸಹಕಾರಿ/ ಸಾರ್ವಜನಿಕ ಸಂಸ್ಥೆಗಳಲ್ಲಿ ವಾಹನ ಚಾಲನೆಯಲ್ಲಿ ಕನಿಷ್ಠ 05 ವರ್ಷಗಳು ಸೇವೆ ಸಲ್ಲಿಸಿರಬೇಕು. |

**2. <u>ಹಾಲು ಉತ್ಪಾದಕರ ಸಹಕಾರಿ ಸಂಘದಲ್ಲಿ ಸೇವೆ ಸಲ್ಲಿಸಿದ ಅಭ್ಯರ್ಥಿಗಳು ಸಲ್ಲಿಸಬೇಕಾದ ಅನುಭವ ಪ್ರಮಾಣಪತ್ರ</u>**

ಹಾಲು ಉತ್ಪಾದಕರ ಸಹಕಾರಿ ಸಂಘದಲ್ಲಿ ಕನಿಷ್ಠ 05 ವರ್ಷಗಳ ಕಾಲ ಕಳಂಕರಹಿತ ಸೇವೆ ಸಲ್ಲಿಸಿದ ಅಭ್ಯರ್ಥಿಗಳು ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಕಾರ್ಯನಿರ್ವಹಿಸಿದ ಬಗ್ಗೆ ಸಂಘದ ದೃಢೀಕರಣ ಪತ್ರದ ಮೂಲ ಪ್ರತಿಯನ್ನು (Original) ಸಲ್ಲಿಸತಕ್ಕದ್ದು. (ಪ್ರಕಟಣೆಯ ಕೊನೆಗೆ ನೀಡಿರುವ ನಮೂನೆಯಲ್ಲಿ)

downloaded from: www.kpscvaani.com

**ಸೂಚನೆಗಳು:**

- ಒಕ್ಕೂಟದಲ್ಲಿ ಖಾಲಿ ಇರುವ ಈ ಮೇಲಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಸಂಬಂಧ ನೇಮಕಾತಿ ಪ್ರಕ್ರಿಯೆಯ ಪೂರ್ಣ ವಿವರಗಳನ್ನು ಒಕ್ಕೂಟದ ಜಾಲತಾಣದಿಂದ chamul.co.in ಪಡೆದು ತಾಕ್ಷಣಿಕ ಸೇವೆಯ (Online) ಮೂಲಕವೇ ಅರ್ಜಿ ಸಲ್ಲಿಸತಕ್ಕದ್ದು.
- ಅಭ್ಯರ್ಥಿಗಳು ಭಾರತೀಯ ನಾಗರೀಕನಾಗತಕ್ಕದ್ದು.
- ಅಭ್ಯರ್ಥಿಗಳು ಒಂದು ಹುದ್ದೆಗೆ ಒಂದೇ ಅರ್ಜಿ ಸಲ್ಲಿಸತಕ್ಕದ್ದು. ಒಂದೇ ಹುದ್ದೆಗೆ ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ ಮೊದಲು ಸಲ್ಲಿಸಿದ ಅರ್ಜಿಯನ್ನು ಮಾತ್ರ ಮಾನ್ಯ ಮಾಡಲಾಗುವುದು.
- ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಇಚ್ಛಿಸದಲ್ಲಿ, ಅಂತಹ ಅಭ್ಯರ್ಥಿಗಳು ಈಗಾಗಲೇ ನೊಂದಣಿ ಮಾಡಿಕೊಂಡಿರುವ ನೊಂದಣಿ ಸಂಖ್ಯೆಯಡಿಯಲ್ಲಿಯೇ ಪ್ರತಿ ಹುದ್ದೆಗೆ ಪ್ರತ್ಯೇಕವಾಗಿ ಅರ್ಜಿ ಶುಲ್ಕವನ್ನು ಪಾವತಿಸಿ, ಪ್ರತ್ಯೇಕವಾಗಿ ಅರ್ಜಿ ಸಲ್ಲಿಸತಕ್ಕದ್ದು.
- ಅರ್ಜಿ ನಮೂನೆಯನ್ನು ಒಕ್ಕೂಟದ ಜಾಲತಾಣದ ಮೂಲಕ ಡೌನ್ ಲೋಡ್ ಮಾಡಿಕೊಂಡು ಮುದ್ರಿಸಿ ಖುದ್ದಾಗಿ / ಅಂಚೆ / ಕೋರಿಯರ್ ಮೂಲಕ ಸಲ್ಲಿಸಿದ್ದಲ್ಲಿ ಅವುಗಳನ್ನು ಗಣನೆಗೆ ತೆಗೆದುಕೊಳ್ಳದೇ ತಿರಸ್ಕರಿಸಲಾಗುವುದು.
- ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಸಲ್ಲಿಸುವ ಅರ್ಜಿಗಳಲ್ಲಿ ಅಪೂರ್ಣ ಮಾಹಿತಿಗಳನ್ನು ನೀಡಿದ್ದಲ್ಲಿ ಅಂತಹ ಅರ್ಜಿಗಳನ್ನು ಗಣನೆಗೆ ತೆಗೆದುಕೊಳ್ಳದೇ ತಿರಸ್ಕರಿಸಲಾಗುವುದು.
- ನಿಗದಿತ ಶುಲ್ಕ ಸಂದಾಯ ಮಾಡದಿದ್ದಲ್ಲಿ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
- ಅಭ್ಯರ್ಥಿಗಳು ವ್ಯಾಸಂಗ ಮಾಡಿದ ವಿದ್ಯಾ ಸಂಸ್ಥೆಗಳಿಂದ ಪಡೆದ ನಡತೆ ಪ್ರಮಾಣಪತ್ರವನ್ನು ಸಲ್ಲಿಸತಕ್ಕದ್ದು.

**3. ವಯೋಮಿತಿ :**

ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ **20–02–2019** ರಂದು ಕನಿಷ್ಟ/ಗರಿಷ್ಟ ವಯೋಮಿತಿ ಈ ಕೆಳಕಂಡಂತೆ ಇರತಕ್ಕದ್ದು.

| ಕ್ರ.ಸಂ. | ಮೀಸಲಾತಿ ವರ್ಗೀಕರಣ | ಕನಿಷ್ಟ ವಯೋಮಿತಿ | ಗರಿಷ್ಟ ವಯೋಮಿತಿ |
|---|---|---|---|
| 1 | ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–1 | 18 | 40 |
| 2 | ಪ್ರವರ್ಗ–2ಎ, 2ಬಿ, 3ಎ ಮತ್ತು 3ಬಿ | 18 | 38 |
| 3 | ಸಾಮಾನ್ಯ ಅಭ್ಯರ್ಥಿಗಳಿಗೆ | 18 | 35 |

ಮಾಜಿ ಸೈನಿಕರಿಗೆ ಅವರು ಸೇನೆಯಲ್ಲಿ ಸೇವೆ ಸಲ್ಲಿಸಿರುವ ಅವಧಿಗೆ ಹಾಗೂ **ಅಂಗವಿಕಲರು ಮತ್ತು ವಿಧವೆಯರಿಗೆ** 10 ವರ್ಷಗಳ ಅವಧಿಗೆ ವಯೋಮಿತಿ ಸಡಿಲಿಕೆ ಇರುತ್ತದೆ.

**ಆಯ್ಕೆ ವಿಧಾನ :–**

**ಹಂತ–1:** ಬಂದ ಅರ್ಜಿಗಳನ್ನು ಪ್ರತಿ ಹುದ್ದೆಗಳಿಗೆ ಪ್ರತ್ಯೇಕ (ಅಂಕಗಳ ಆಧಾರದ ಮೇಲೆ) ಜೇಷ್ಠತಾ ಪಟ್ಟಿಯನ್ನು ತಯಾರು ಮಾಡಿ, **ಒಂದು** ಹುದ್ದೆಗೆ **ಇಪ್ಪತ್ತು** (1:20) ಅಭ್ಯರ್ಥಿಗಳನ್ನು ಲಿಖಿತ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡಲಾಗುವುದು.

**ಹಂತ–2:** ಅರ್ಹ ಅಭ್ಯರ್ಥಿಗಳಿಗೆ ಕರ್ನಾಟಕ ರಾಜ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಒ 123 ಸಿಎಲ್ಎಂ 2016, ಬೆಂಗಳೂರು, ದಿನಾಂಕ 29–07–2017 ರ ಅನ್ವಯ ಹುದ್ದೆಗಳ ನೇಮಕಾತಿಗೆ ಲಿಖಿತ ಪರೀಕ್ಷೆಯನ್ನು ಏರ್ಪಡಿಸಲಾಗುವುದು.

**ನೇಮಕಾತಿಯ ಹುದ್ದೆಗಳಿಗೆ ಪತ್ರಿಕೆಯ ವಿವರ ಈ ಕೆಳಕಂಡಂತಿರುತ್ತದೆ.**

| ಕ್ರ. ಸಂ. | ವಿಷಯ | ಅಂಕ |
|---|---|---|
| 1 | ಕನ್ನಡ ಭಾಷೆಗೆ | 50 |
| 2 | ಆಂಗ್ಲ ಭಾಷೆಗೆ | 25 |
| 3 | ಸಾಮಾನ್ಯ ಜ್ಞಾನಕ್ಕೆ | 25 |
| 4 | ಸಹಕಾರ, ಸಹಕಾರಿ ಕಾನೂನು ಮತ್ತು ಕಂಪ್ಯೂಟರ್ ವಿಷಯಕ್ಕೆ | 50 |

downloaded from: www.kpscvaani.com

| | | |
|---|---|---|
| 5 | ಭಾರತೀಯ ಸಂವಿಧಾನ | 25 |
| 6 | ಹಾಲು ಒಕ್ಕೂಟಕ್ಕೆ ಸಂಬಂಧಿಸಿದ ವಿಷಯಗಳು | 25 |
| ಒಟ್ಟು ಅಂಕಗಳು | | 200 |

ಅರ್ಹ ಅಭ್ಯರ್ಥಿಗಳಿಗೆ ಮೇಲಿನಂತೆ ಒಟ್ಟು 200 ಅಂಕಗಳಿಗೆ ಬಾಹ್ಯ ಮೂಲಗಳಿಂದ ಲಿಖಿತ ಪರೀಕ್ಷೆ ನಡೆಸಲಾಗುವುದು. ಪರೀಕ್ಷೆಯ ಪ್ರವೇಶ ಪತ್ರ, ದಿನಾಂಕ ಹಾಗೂ ಪರೀಕ್ಷೆಯ ಕಾಲಾವಧಿಯನ್ನು ಅರ್ಹ ಅಭ್ಯರ್ಥಿಗಳಿಗೆ ಒಕ್ಕೂಟದ ವೆಬ್ ಸೈಟ್‌ನಲ್ಲಿ ತಿಳಿಸಲಾಗುವುದು (ಆಂಗ್ಲ ಭಾಷೆಯ ಪ್ರಶ್ನೆ ಪತ್ರಿಕೆಯನ್ನು ಹೊರತುಪಡಿಸಿ, ಇನ್ನುಳಿದ ವಿಷಯಗಳ ಪ್ರಶ್ನೆ ಪತ್ರಿಕೆಗಳು ಕನ್ನಡ ಮಾಧ್ಯಮದಲ್ಲಿ ಇರುತ್ತವೆ.)

**ಹಂತ–3:** ಲಿಖಿತ ಪರೀಕ್ಷೆಯಲ್ಲಿ (Written Test) ಗಳಿಸಿದ ಅಂಕಗಳ ಆಧಾರದ ಮೇಲೆ ಅಭ್ಯರ್ಥಿಗಳನ್ನು 1:5 ರ ಅನುಪಾತದಲ್ಲಿ ಸಂದರ್ಶನಕ್ಕೆ ಕರೆಯಲಾಗುವುದು.

ಸಂದರ್ಶನಕ್ಕೆ ಗರಿಷ್ಠ 15 ಅಂಕಗಳನ್ನು ನಿಗದಿಪಡಿಸಲಾಗಿದೆ. ಅಭ್ಯರ್ಥಿಯು ಲಿಖಿತ ಪರೀಕೆಯಲ್ಲಿ ಗಳಿಸಿದ ಅಂಕಗಳನ್ನು ಶೇ. 85 ಕ್ಕೆ ಪ್ರಾಪ್ತವಾಗುವ ಅಂಕಗಳ ಜೊತೆಗೆ ಮತ್ತು ಸಂದರ್ಶನದಲ್ಲಿ ಗಳಿಸುವ ಅಂಕಗಳನ್ನು ಒಟ್ಟುಗೂಡಿಸಿ ಅಂತಿಮ ಅರ್ಹತಾ ಪಟ್ಟಿಯನ್ನು ತಯಾರಿಸಿ ಅರ್ಹತೆ ಆಧಾರದಲ್ಲಿ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಅಭ್ಯರ್ಥಿಗಳ ಅರ್ಹತೆಯ ಬಗ್ಗೆ ಒಕ್ಕೂಟದ ನೇಮಕಾತಿ ಪ್ರಾಧಿಕಾರದ ನಿರ್ಣಯವೇ **ಒಕ್ಕೂಟವು ತಿಳಿಸಿದ ಸ್ಥಳದಲ್ಲಿ, ಲಿಖಿತ ಪರೀಕ್ಷೆ ಹಾಗೂ ಸಂದರ್ಶನಕ್ಕೆ ಅಭ್ಯರ್ಥಿಗಳು ಅವರ ಸ್ವಂತ ಖರ್ಚಿನಲ್ಲಿ ಹಾಜರಾಗುವುದು.**

ಚಾಲಕ ಹುದ್ದೆಗಳನ್ನು ನೇಮಕಾತಿ ಮಾಡುವಾಗ ಹುದ್ದೆಗೆ ಅವಶ್ಯಕತೆ ವಿದ್ಯಾರ್ಹತೆ ಮತ್ತು ಅನುಭವದ ಅಧಾರದ ಮೇಲೆ ಬಂದ ಅರ್ಜಿಗಳನ್ನು ಪ್ರತಿ ಹುದ್ದೆಗಳಿಗೆ ಪ್ರತ್ಯೇಕ (ಅಂಕಗಳ ಆಧಾರದ ಮೇಲೆ) ಜೇಷ್ಠತಾ ಪಟ್ಟಿಯನ್ನು ತಯಾರು ಮಾಡಿ, ಗಳಿಸಿದ ಅಂಕಗಳ ಜೇಷ್ಠತಾ ಪಟ್ಟಿಯ ಆಧಾರದ ಮೇಲೆ ಪಡೆದ ಅಂಕಗಳನ್ನು 85ಕ್ಕೆ ಇಳಿಸಿ ಉಳಿದ 15 ಅಂಕಗಳಿಗೆ ಒಂದು ಹುದ್ದೆಗೆ 5 ಅಭ್ಯರ್ಥಿಗಳನ್ನು ಮೌಖಿಕ ಪರೀಕ್ಷೆಗೆ ಕರೆಯಲಾಗುವುದು

**4. ಮೀಸಲಾತಿಗಳು :**

ಜಾತಿ / ವರ್ಗ ಮೀಸಲಾತಿ ಕೋರಬಯಸುವ ಅಭ್ಯರ್ಥಿಗಳು ಇದಕ್ಕೆ ಸಂಬಂಧಿಸಿದಂತೆ ಸರ್ಕಾರವು ನಿಗದಿಪಡಿಸಿರುವ ನಮೂನೆಗಳಲ್ಲಿ ಹಾಗೂ ಚಾಲ್ತಿಯಲ್ಲಿರುವ ಅಗತ್ಯ ಪ್ರಮಾಣಪತ್ರವನ್ನು ಲಗತ್ತಿಸತಕ್ಕದ್ದು. (ವಿದ್ಯಾಭ್ಯಾಸ / ಶಿಕ್ಷಣಕ್ಕಾಗಿ / ಇತರೆ ಸರ್ಕಾರಿ ಸೌಲಭ್ಯಕ್ಕಾಗಿ ಅಥವಾ ಸಾಲಕ್ಕಾಗಿ ಪಡೆದಿರುವ ಜಾತಿ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ) ಮೀಸಲಿರಿಸಿದ ವರ್ಗಗಳಲ್ಲಿ ಮಹಿಳಾ, ಮಾಜಿ ಸೈನಿಕ, ಕನ್ನಡ ಮಾಧ್ಯಮ, ಗ್ರಾಮೀಣ ಹಾಗೂ ಯೋಜನಾ ನಿರಾಶ್ರಿತ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಅಂತಹ ಹುದ್ದೆಗಳನ್ನು ಅದೇ ವರ್ಗಕ್ಕೆ ಸೇರಿದ ಇತರೇ ಅರ್ಹ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.

ಎ) **ಗ್ರಾಮೀಣ ಅಭ್ಯರ್ಥಿ :**

ಗ್ರಾಮೀಣ ಮೀಸಲಾತಿಯಡಿ ಅರ್ಜಿ ಸಲ್ಲಿಸುವಂತಹ ಅಭ್ಯರ್ಥಿಗಳು ಚಾಲ್ತಿಯಲ್ಲಿರುವ ನಿಯಮಗಳ ರೀತ್ಯಾ 1 ರಿಂದ 10ನೇ ತರಗತಿಯವರೆಗೆ ಗ್ರಾಮೀಣ ಮೀಸಲಾತಿಗೆ ಒಳಪಡುವ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾದಲ್ಲಿ ಮಾತ್ರ ಈ ಮೀಸಲಾತಿಯನ್ನು ಪಡೆಯಲು ಅರ್ಹರು. ಗ್ರಾಮೀಣ ಅಭ್ಯರ್ಥಿಗಳಿಗೆಂದು ಮೀಸಲಿರಿಸಿದ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ನಮೂನೆ–2 ನ್ನು ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲು ರುಜುವಿನೊಂದಿಗೆ ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡಿರತಕ್ಕದ್ದು.

ಅಂತೆಯೇ ಗ್ರಾಮೀಣ ಮೀಸಲಾತಿ ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–2ಎ, 2ಬಿ, 3ಎ, 3ಬಿ ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು ಕಡ್ಡಾಯವಾಗಿ ಗ್ರಾಮೀಣ ಮೀಸಲಾತಿಯ ಪ್ರಮಾಣಪತ್ರವನ್ನು ನಮೂನೆ–2 ರಲ್ಲಿ ನಿಗದಿಪಡಿಸಿದ ಕೊನೆ ದಿನಾಂಕದೊಳಗೆ ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲು ರುಜು ಹಾಗೂ ಜಾರಿ ದಿನಾಂಕದೊಂದಿಗೆ ಪಡೆದಿಟ್ಟುಕೊಂಡಿರಕ್ಕದ್ದು. ಮೂಲ ದಾಖಲಾತಿ ಪರಿಶೀಲನೆಗೆ ಅರ್ಹರಾದಾಗ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆ ದಿನಾಂಕದೊಳಗೆ

downloaded from: www.kpscvaani.com

ಚಾಲ್ತಿಯಲ್ಲಿರುವ ಮೀಸಲಾತಿ ಪ್ರಮಾಣಪತ್ರದ ಮೂಲ ಪ್ರತಿಯನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು, ತಪ್ಪಿದ್ದಲ್ಲಿ, ಅಂತಹ ಅಭ್ಯರ್ಥಿಗಳ ಗ್ರಾಮೀಣ ಮೀಸಲಾತಿಯನ್ನು ರದ್ದುಪಡಿಸಲಾಗುವುದು (ಅಭ್ಯರ್ಥಿಗಳ ನೇರ ಮೀಸಲಾತಿ ಪ್ರಮಾಣ ಪತ್ರಗಳು ತಿರಸ್ಕೃತಗೊಂಡಲ್ಲಿ ಅಂತಹವರು ಗ್ರಾಮೀಣ ಮೀಸಲಾತಿಗೆ ಸಹ ಅನರ್ಹರಾಗುತ್ತಾರೆ. ಈ ಪ್ರಮಾಣಪತ್ರಗಳ ನಮೂನೆಗಳನ್ನು ನೇಮಕಾತಿ ಪ್ರಕಟಣೆಯ ಕೊನೆಯಲ್ಲಿ ಅನುಬಂಧದಲ್ಲಿ ನೀಡಲಾಗಿದೆ.)

ಬಿ) **ಅಂಗವಿಕಲ ಅಭ್ಯರ್ಥಿ :**

ಅಂಗವಿಕಲ ಮೀಸಲಾತಿ ಅಡಿ ಅರ್ಜಿ ಸಲ್ಲಿಸುವಂತಹ ಅಭ್ಯರ್ಥಿಗಳು ಚಾಲ್ತಿಯಲ್ಲಿರುವ ನಿಯಮಗಳ ರೀತ್ಯ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿಯ ವೈದ್ಯಕೀಯ ಪ್ರಾಧಿಕಾರ / ತಾಲ್ಲೂಕು ಮಟ್ಟದ ವೈದ್ಯಕೀಯ ಪ್ರಾಧಿಕಾರ / ಜಿಲ್ಲಾ ಮಟ್ಟದ ವೈದ್ಯಕೀಯ ಪ್ರಾಧಿಕಾರ, ಇವರಿಂದ ಪ್ರಮಾಣಪತ್ರವನ್ನು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡಿರತಕ್ಕದ್ದು. ಮೂಲ ದಾಖಲಾತಿಗಳ ಪರಿಶೀಲನೆಗೆ ಅರ್ಹರಾದಾಗ ಈ ಪ್ರಮಾಣಪತ್ರದ ಮೂಲ ಪ್ರತಿಯನ್ನು ಪರಿಶೀಲನೆಗೆ ತಪ್ಪದೇ ಹಾಜರಪಡಿಸತಕ್ಕದ್ದು. ತಪ್ಪಿದ್ದಲ್ಲಿ, ಅಂತಹ ಅಭ್ಯರ್ಥಿಗಳ ಅಂಗವಿಕಲ ಮೀಸಲಾತಿಯನ್ನು ರದ್ದುಪಡಿಸಲಾಗುವುದು. ಇತರೆ ಯಾವುದೇ ನಮೂನೆಯಲ್ಲಿ ಅಂಗವಿಕಲತೆಯ ಬಗ್ಗೆ ಪಡೆಯಲಾಗಿರುವ ಪ್ರಮಾಣಪತ್ರಗಳನ್ನು / ಗುರುತಿನ ಚೀಟಿಯ ಪ್ರತಿಗಳನ್ನು ಪರಿಗಣಿಸಲು ಬರುವುದಿಲ್ಲ. (ಈ ಪ್ರಮಾಣ ಪತ್ರದ ನಮೂನೆಯನ್ನು ನೇಮಕಾತಿ ಪ್ರಕಟಣೆಯ ಕೊನೆಯಲ್ಲಿ ಅನುಬಂಧದಲ್ಲಿ ನೀಡಲಾಗಿದೆ.)

**ಸಿ) ಕನ್ನಡ ಮಾಧ್ಯಮ ಅಭ್ಯರ್ಥಿ :**

ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆಂದು ಮೀಸಲಿರಿಸಿದ ಹುದ್ದೆಗಳಿಗೆ ಅರ್ಜಿ ಸಲ್ಲಿಸುವಂತಹ ಅಭ್ಯರ್ಥಿಗಳು ಚಾಲ್ತಿಯಲ್ಲಿರುವ ನಿಯಮಗಳ ರೀತ್ಯ 1ನೇ ತರಗತಿಯಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ, ಜಾರಿ ದಿನಾಂಕ ಹಾಗೂ ಮೊಹರಿನೊಂದಿಗೆ ಪ್ರಮಾಣಪತ್ರವನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡಿರತಕ್ಕದ್ದು ಹಾಗೂ ಮೂಲ ದಾಖಲಾತಿ ಪರಿಶೀಲನೆಗೆ ಅರ್ಹರಾದಾಗ ಇದೇ ಪ್ರಮಾಣಪತ್ರಗಳ ಮೂಲ ಪ್ರತಿಗಳನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದ್ದಲ್ಲಿ, ಅಂತಹ ಅಭ್ಯರ್ಥಿಗಳ ಕ.ಮಾ.ಅ. ಮೀಸಲಾತಿಯನ್ನು ರದ್ದುಪಡಿಸಲಾಗುವುದು. (ಈ ಪ್ರಮಾಣಪತ್ರದ ನಮೂನೆಯನ್ನು ನೇಮಕಾತಿ ಪ್ರಕಟಣೆಯ ಕೊನೆಯಲ್ಲಿ ಅನುಬಂಧದಲ್ಲಿ ನೀಡಲಾಗಿದೆ.)

**ಡಿ) ಮಾಜಿ ಸೈನಿಕ ಅಭ್ಯರ್ಥಿ :**

ಮಾಜಿ ಸೈನಿಕ ಅಂದರೆ ಕೇಂದ್ರ ಸಶಸ್ತ್ರ ದಳಗಳಾದ ಭೂದಳ, ನೌಕಾದಳ ಮತ್ತು ವಾಯುದಳಗಳಲ್ಲಿ ಯಾವುದೇ ಶ್ರೇಣಿಯಲ್ಲಿ (ಯೋಧ ಅಥವಾ ಯೋಧನಲ್ಲದ) ಸೇವೆ ಸಲ್ಲಿಸಿದ ವ್ಯಕ್ತಿ.

ಅಂದರೆ :

ಎ) ಅಂತಹ ಸೇವೆಯಿಂದ ನಿವೃತ್ತಿ ಹೊಂದಿದ ನಂತರ ನಿವೃತ್ತಿ ವೇತನ ಪಡೆಯುತ್ತಿರುವ ವ್ಯಕ್ತಿ.

ಬಿ) ವೈದ್ಯಕೀಯ ಕಾರಣಗಳಿಂದ ಮಿಲಿಟರಿ ಸೇವೆಗೆ ಅನರ್ಹನಾದವ ಅಥವಾ ವ್ಯಕ್ತಿಯ ಹಿಡಿತಕ್ಕೂ ಮೀರಿದ ಪರಿಸ್ಥಿತಿಗಳಿಂದ ಮತ್ತು ವೈದ್ಯಕೀಯ ಅಥವಾ ಅಸಾಮರ್ಥ್ಯದ ಪಿಂಚಣಿ ಸೇವೆಯಿಂದ ಬಿಡುಗಡೆಯಾದ ವ್ಯಕ್ತಿ.

ಸಿ) ಸ್ವಂತ ಕೋರಿಕೆ ಹೊರತುಪಡಿಸಿ ಸಿಬ್ಬಂದಿ ಕಡಿತದ ಪರಿಣಾಮದಿಂದ ಅಂತಹ ಸೇವೆಯಿಂದ ಬಿಡುಗಡೆ ಹೊಂದಿದ ವ್ಯಕ್ತಿ.

ಡಿ) ಸ್ವಂತ ಕೋರಿಕೆ ಮೇರೆಗೆ ಅಥವಾ ದುರ್ನಡತೆ ಅಥವಾ ಅಸಾಮರ್ಥ್ಯದ ಕಾರಣದಿಂದಾಗಿ ತೆಗೆದು ಹಾಕಿರುವ ಅಥವಾ ಕರ್ತವ್ಯದಿಂದ ವಜಾ ಮಾಡಿದ ವ್ಯಕ್ತಿಗಳನ್ನು ಹೊರತುಪಡಿಸಿ, ನಿರ್ದಿಷ್ಟ ಅವಧಿಯನ್ನು ಪೂರೈಸಿದ ತರುವಾಯ ಬಿಡುಗಡೆ ಹೊಂದಿದ ವ್ಯಕ್ತಿ ಮತ್ತು ಗ್ರಾಚ್ಯುಟಿ ಪಡೆದಿರುವ ವ್ಯಕ್ತಿ.

ಇ) ಪ್ರಾಂತೀಯ ಸೇವೆಯ ಈ ಕೆಳಗೆ ಹೆಸರಿಸಿದ ವರ್ಗದ ಸಿಬ್ಬಂದಿ.

1. ನಿರಂತರ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಪಿಂಚಣಿದಾರರು.
2. ಮಿಲಿಟರಿ ಸೇವೆಯಿಂದ ಉಂಟಾದ ದೈಹಿಕ ಅಸಾಮರ್ಥ್ಯತೆ ಹೊಂದಿ ಬಿಡುಗಡೆಯಾದ ವ್ಯಕ್ತಿ.
3. ಗ್ಯಾಲಂಟ್ರಿ ಪ್ರಶಸ್ತಿ ವಿಜೇತರು.

**ವಿವರಣೆ :**

downloaded from: www.kpscvaani.com

ಎ) ಈ ಸೌಲಭ್ಯಕ್ಕೆ ಡಿಫೆನ್ಸ್ ಸೆಕ್ಯೂರಿಟಿ ಕಾರ್ಪ್ಸ್, ಜನರಲ್ ರಿಸರ್ವ್ ಇಂಜಿನೀಯರಿಂಗ್ ಕಾರ್ಪ್ಸ್, ಲೋಕ ಸಹಾಯಕ ಸೇವೆ ಮತ್ತು ಪ್ಯಾರಾ ಮಿಲಿಟರಿ ದಳದಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿ ಅರ್ಹರಲ್ಲ.

ಬಿ) ಕೇಂದ್ರ ಸಶಸ್ತ್ರದಳದ ಸೇವೆಯಲ್ಲಿ ವ್ಯಕ್ತಿಗಳು ಸೇವೆಯಿಂದ ನಿವೃತ್ತಿ ಹೊಂದಿದ ನಂತರ ಮಾಜಿ ಸೈನಿಕರ ವರ್ಗದಡಿ ಬರುವ ವ್ಯಕ್ತಿಗೆ ಪೂರ್ಣವಾಗಲು ಒಂದು ವರ್ಷಕ್ಕೆ ಮುನ್ನ ಪುನರ್ ಉದ್ಯೋಗಕ್ಕೆ ಅರ್ಜಿ ಹಾಕಿಕೊಳ್ಳಲು ಹಾಗೂ ಅವರಿಗೆ ಮಾಜಿ ಸೈನಿಕರಿಗೆ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಹೊಂದಲು ಅನುಮತಿ ನೀಡಲಾಗಿದ್ದರೂ ಸಮವಸ್ತ್ರವನ್ನು ತ್ಯಜಿಸಲು ಅನುಮತಿ ನೀಡುವವರೆಗೆ ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಒಕ್ಕೂಟದ ಹುದ್ದೆಗೆ ನೇಮಕ ಹೊಂದುವಂತಿಲ್ಲ.

ಸಿ) ಕೇಂದ್ರ ಸಶಸ್ತ್ರ ದಳಗಳಲ್ಲಿ ಸೇವೆ ಸಲ್ಲಿಸುವಾಗ ಕೊಲ್ಲಲ್ಪಟ್ಟ ಅಥವಾ ಶಾಶ್ವತವಾಗಿ ದೈಹಿಕ ವಿಕಲತೆ ಹೊಂದಿದ ವ್ಯಕ್ತಿಗಳ ಕುಟುಂಬದವರು (ಸಂದರ್ಭಾನುಸಾರ ಪತ್ನಿ ಮತ್ತು ಮಕ್ಕಳು ಮತ್ತು ಮಲ ಮಕ್ಕಳು) ಮಾಜಿ ಸೈನಿಕ ಮೀಸಲಾತಿ ಪಡೆಯಲು ಅರ್ಹರಿರುತ್ತಾರೆ. ಆದರೆ ಅಂತಹವರುಗಳು ವಯೋಮಿತಿ ಸಡಿಲಿಕೆಯನ್ನು ಪಡೆಯಲು ಅರ್ಹರಿರುವುದಿಲ್ಲ.

**ಡಿ) ಹಾಲು ಉತ್ಪಾದಕರ ಸಹಕಾರಿ ಸಂಘಗಳ ಸಿಬ್ಬಂದಿಗಳಿಗೆ ಕಾಯ್ದಿರಿಸಲಾದ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಬಯಸುವ ಅರ್ಹ ಅಭ್ಯರ್ಥಿಗಳು, ಅರ್ಜಿಯ ಜೊತೆಗೆ ಲಗತ್ತಿಸುವ ಪ್ರಮಾಣಪತ್ರದ ನಮೂನೆಯನ್ನು ಈ ಪ್ರಕಟಣೆಯ ಕೊನೆಯಲ್ಲಿ ಅನುಬಂಧದಲ್ಲಿ ನೀಡಲಾಗಿದೆ. (ಸದರಿ ಪ್ರಮಾಣಪತ್ರಕ್ಕೆ ಮಾರ್ಗದ ಸಂಬಂಧಪಟ್ಟ ವಿಸ್ತರಣಾಧಿಕಾರಿಗಳ ದೃಢೀಕರಣ ಕಡ್ಡಾಯವಾಗಿದ್ದು, ದೃಢೀಕರಿಸಿದ ವಿಸ್ತರಣಾಧಿಕಾರಿಗಳ ಹೆಸರು ಮತ್ತು ದರ್ಜೆಯ ಸ್ಪಷ್ಟ ನಮೂದನೆ ಕಡ್ಡಾಯವಾಗಿರುತ್ತದೆ)**

ಇ) ಚಾಮುಲ್ ಒಳಸೇವಾ ಸಿಬ್ಬಂದಿ ಅಥವಾ ಚಾಮುಲ್ ವ್ಯಾಪ್ತಿಯಲ್ಲಿ ಬರುವ ಹಾಲು ಉತ್ಪಾದಕರ ಸಂಘಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಒಂದು ವೇಳೆ ನಿಗಧಿಪಡಿಸಿದ ವಯೋಮಿತಿಯೊಳಗೆ ಸೇವೆಗೆ ಸೇರ್ಪಡೆಗೊಂಡಿದ್ದಲ್ಲಿ ಅವರು ಒಳಸೇವೆ / ಹಾಲು ಉತ್ಪಾದಕರ ಸಂಘಗಳಲ್ಲಿ ಸಲ್ಲಿಸಿರುವ ಸೇವೆಗನುಣವಾಗಿ ವಯೋಮಿತಿಯಲ್ಲಿ ಸಡಿಲಿಕೆ ಇರುತ್ತದೆ.

**ಅರ್ಜಿ ಶುಲ್ಕ :**

| | | |
|---|---|---|
| 1 | ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಂಗವಿಕಲರು, ಮಾಜಿ ಸೈನಿಕರು ಹಾಗೂ ಪ್ರವರ್ಗ–1 ಅಭ್ಯರ್ಥಿಗಳು ಪಾವತಿಸಬೇಕಾದ ಅರ್ಜಿ ಶುಲ್ಕ | ರೂ. 300/– + ಅಂಚೆ ಕಛೇರಿ ಶುಲ್ಕ ಪ್ರತ್ಯೇಕ |
| 2 | ಇತರೆ ವರ್ಗದ ಅಭ್ಯರ್ಥಿಗಳು ಪಾವತಿಸಬೇಕಾದ ಅರ್ಜಿ ಶುಲ್ಕ | ರೂ. 600/– + ಅಂಚೆ ಕಛೇರಿ ಶುಲ್ಕ ಪ್ರತ್ಯೇಕ |

- ಅಭ್ಯರ್ಥಿಗಳು ಅರ್ಜಿ ಭರ್ತಿ ಮಾಡಲು ಆನ್‌ಲೈನ್ ನಲ್ಲಿ ನೀಡಿರುವ ಸೂಚನೆಗಳನ್ನು ತಪ್ಪದೇ ಪಾಲಿಸುವುದು.
- ತಪ್ಪು ಮಾಹಿತಿಗಳನ್ನು ನೀಡಿ ಅರ್ಜಿ ಸಲ್ಲಿಸಿದಲ್ಲಿ ಅಂತಹವರ ಅರ್ಜಿಯನ್ನು ತಿರಸ್ಕರಿಸಲಾಗುವುದು.
- ನಿಗದಿತ ಶುಲ್ಕವನ್ನು ಸಂದಾಯ ಮಾಡದಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
- ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಇಚ್ಛಿಸದಲ್ಲಿ ಅಂತಹ ಅಭ್ಯರ್ಥಿಗಳು ಈಗಾಗಲೇ ನೊಂದಣಿ ಮಾಡಿರುವ ನೊಂದಣಿ ಸಂಖ್ಯೆಯಡಿಯಲ್ಲಿಯೇ ಪ್ರತಿ ಹುದ್ದೆಗೆ ಪ್ರತ್ಯೇಕವಾಗಿ ಅರ್ಜಿ ಶುಲ್ಕವನ್ನು ಪಾವತಿಸಿ, ಪ್ರತ್ಯೇಕವಾಗಿ ಅರ್ಜಿ ಸಲ್ಲಿಸತಕ್ಕದ್ದು.
- ಅರ್ಜಿ ಶುಲ್ಕವನ್ನು ಪಾವತಿಸುವುದಕ್ಕೆ ಕರ್ನಾಟಕ ರಾಜ್ಯದಲ್ಲಿನ ಯಾವುದೇ ವಿದ್ಯುನ್ಮಾನ ಪಾವತಿ (ಇ–ಪೇಮೆಂಟ್) ಅಂಚೆ ಕಚೇರಿಗೆ ತೆರಳಿ ನಿಗದಿತ ಶುಲ್ಕ + ಅಂಚೆ ಕಛೇರಿ ಶುಲ್ಕ ಪ್ರತ್ಯೇಕ ಪಾವತಿ ಮಾಡತಕ್ಕದ್ದು.
- ಶುಲ್ಕವನ್ನು ಪಾವತಿಸಲು ನಿಗದಿಪಡಿಸಿದ ಕೊನೆಯ ದಿನಾಂಕವಾದ **21–03–2019** ರ ನಂತರ ಶುಲ್ಕವನ್ನು ಸಂದಾಯ ಮಾಡಿದ್ದಲ್ಲಿ, ಅಂತಹವರ ಅರ್ಜಿಯನ್ನು ತಿರಸ್ಕರಿಸಲಾಗುವುದು. ಡಿ.ಡಿ./ಚೆಕ್/ಪೋಸ್ಟಲ್ ಆರ್ಡರ್/ಮನಿ ಆರ್ಡರ್ ಇವುಗಳನ್ನು ಸ್ವೀಕರಿಸಲಾಗುವುದಿಲ್ಲ.
- ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೂ ವಿಳಂಬ ಮಾಡದೇ ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

downloaded from: www.kpscvaani.com

- ಒಮ್ಮೆ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂದಿರುಗಿಸಲಾಗುವುದಿಲ್ಲ ಅಥವಾ ಅದನ್ನು ಇತರೇ ಯಾವುದೇ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ.
- ಅರ್ಜಿಗಳನ್ನು ಭರ್ತಿ ಮಾಡಲು ಮತ್ತು ಶುಲ್ಕ ಪಾವತಿಸಲು ನಿಗದಿಪಡಿಸಿದ ಕೊನೆಯ ದಿನಾಂಕವು ಸಾರ್ವತ್ರಿಕ ರಜಾ ದಿನವಾಗಿ ಘೋಷಿಸಲ್ಪಟ್ಟರೆ, ಆ ಮುಂದಿನ ಕೆಲಸದ ದಿನವು ಅರ್ಜಿಗಳನ್ನು ಭರ್ತಿ ಮತ್ತು ಶುಲ್ಕ ಪಾವತಿಸಲು ಕೊನೆಯ ದಿನಾಂಕವಾಗುವುದು.

1) ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಪ್ರಾರಂಭಿಕ ದಿನಾಂಕ : **20–02–2019**
2) ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : **20–03–2019**
3) ಅರ್ಜಿ ಶುಲ್ಕ ಪಾವತಿಸಲು ಕೊನೆಯ ದಿನಾಂಕ : **21–03–2019**
(ಅಂಚೆ ಕಛೇರಿಯ ಕಾರ್ಯ ವೇಳೆಯೊಳಗೆ ಮಾತ್ರ)

ಅರ್ಜಿಗಳನ್ನು ಆನ್‌ಲೈನ್ ಮೂಲಕ ಭರ್ತಿ ಮಾಡಿ ಅರ್ಜಿ ಶುಲ್ಕವನ್ನು ಅಂಚೆ ಕಛೇರಿಯ ಕೆಲಸದ ವೇಳೆಯೊಳಗೆ ಕರ್ನಾಟಕ ರಾಜ್ಯದ ಯಾವುದೇ ಎಲೆಕ್ಟ್ರಾನಿಕ್ ಅಂಚೆ ಕಛೇರಿಗಳಲ್ಲಿ (e-Payment post offices only) ಮಾತ್ರ ಸಂದಾಯ ಮಾಡಬಹುದಾಗಿರುತ್ತದೆ.

6) **<u>ಸಾಮಾನ್ಯ ನಿಬಂಧನೆಗಳು :</u>**

ಅರ್ಜಿಗಳನ್ನು ಭರ್ತಿ ಮಾಡಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ನೇಮಕಾತಿ ಪ್ರಕಟಣೆಯಲ್ಲಿ ಆಯಾ ಹುದ್ದೆಗಳ ಮುಂದೆ ಸೂಚಿಸಿರುವ ಕನಿಷ್ಠ ವಿದ್ಯಾರ್ಹತೆಯನ್ನು ಅಭ್ಯರ್ಥಿಗಳು ಕಡ್ಡಾಯವಾಗಿ ಹೊಂದಿರಲೇಬೇಕು.

ಎಸ್.ಎಸ್.ಎಲ್.ಸಿ. ಅಥವಾ ಇದಕ್ಕೆ ತತ್ಸಮವೆಂದು ರಾಜ್ಯ ಸರ್ಕಾರದಿಂದ ಘೋಷಿಸಲ್ಪಟ್ಟ ಇತರೇ ಯಾವುದೇ ಪರೀಕ್ಷೆಯಲ್ಲಿ ಕನ್ನಡವನ್ನು ಪ್ರಥಮ ಅಥವಾ ದ್ವಿತೀಯ ಅಥವಾ ಐಚ್ಛಿಕ ವಿಷಯವಾಗಿ ಕಡ್ಡಾಯವಾಗಿ ವ್ಯಾಸಂಗ ಮಾಡಿರತಕ್ಕದ್ದು. (ಸಹಾಯಕ ವ್ಯವಸ್ಥಾಪಕರು (ಪ.ವೈ. / ಕೃ.ಗ) ಹುದ್ದೆಗಳಿಗೆ ಹೊರತುಪಡಿಸಿ)

ಪರೀಕ್ಷಾವಧಿ 2 ವರ್ಷ ಇರುತ್ತದೆ, ಅವಶ್ಯವಿದ್ದಲ್ಲಿ ಪರೀಕ್ಷಾವಧಿಯನ್ನು ವಿಸ್ತರಿಸಲಾಗುವುದು. ಪರೀಕ್ಷಾವಧಿಯಲ್ಲಿ ಅಭ್ಯರ್ಥಿಗಳ ಸೇವೆ ತೃಪ್ತಿಕರವಾಗಿದ್ದಲ್ಲಿ ಮಾತ್ರ ಅಂತಹವರ ಸೇವೆಯನ್ನು ಖಾಯಂಗೊಳಿಸಲಾಗುವುದು.

ಅರ್ಜಿಯಲ್ಲಿ ನಮೂದಿಸಿದ ಅಂಕಪಟ್ಟಿ / ಇತರೆ ದಾಖಲಾತಿಗಳಲ್ಲಿ ಯಾವುದೇ ವ್ಯತ್ಯಾಸ ಕಂಡುಬಂದಲ್ಲಿ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ. ಈ ನೇಮಕಾತಿ ಪ್ರಕಟಣೆಯನ್ನು ಯಾವುದೇ ಕಾರಣ ನೀಡದೆ ಯಾವುದೇ ಹಂತದಲ್ಲಿ ಹಿಂದಕ್ಕೆ ಪಡೆಯುವ / ರದ್ದುಪಡಿಸುವ ಅಧಿಕಾರವನ್ನು ಒಕ್ಕೂಟವು ಹೊಂದಿರುತ್ತದೆ.

ಸೇವಾನುಭವ ದೃಢೀಕರಣ ಪತ್ರವನ್ನು ಸಲ್ಲಿಸುವವರು ಉದ್ಯೋಗದಾತರಿಂದ ಪಡೆದ ಸೇವಾ ದೃಢೀಕರಣ ಪತ್ರವನ್ನು ಅರ್ಜಿ ಸಲ್ಲಿಸುವಾಗಲೇ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಬೇಕು ಹಾಗೂ ಉದ್ಯೋಗದಾತರಿಂದ ವೇತನವನ್ನು ಪಡೆದಿರುವ ದೃಢೀಕರಣ ಹಾಗೂ ಬ್ಯಾಂಕ್ ಸ್ಟೇಟ್‌ಮೆಂಟ್‌ನ್ನು ಮೌಖಿಕ ಸಂದರ್ಶನದ ವೇಳೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

**<u>7) ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಭರ್ತಿ ಮಾಡುವ ಮೊದಲು ಕೆಳಕಂಡ ಸೂಚನೆಗಳನ್ನು ಕಡ್ಡಾಯವಾಗಿ ತಿಳಿದುಕೊಳ್ಳತಕ್ಕದ್ದು.</u>**

**ಹಂತ 1 :** ಅಭ್ಯರ್ಥಿಗಳು ಒಕ್ಕೂಟದ ಅಧಿಕೃತ ವೆಬ್‌ಸೈಟ್ chamul.co.in ಮೂಲಕ ಆನ್‌ಲೈನ್ ಅರ್ಜಿಯನ್ನು ಭರ್ತಿ ಮಾಡುವ ಪೂರ್ವದಲ್ಲಿ ಅಧಿಸೂಚನೆ ಮತ್ತು ಸೂಚನೆಗಳನ್ನು ಕಡ್ಡಾಯವಾಗಿ ಓದಿ ಮುಂದುವರಿಯುವುದು.

**ಹಂತ 2 :** REGISTER HERE TO CREATE AN ACCOUNTಮೇಲೆ ಒತ್ತಿ ಮುಂದುವರೆಯಿರಿ, ರಿಜಿಸ್ಟ್ರೇಷನ್ ಪುಟವು ತೆರೆದುಕೊಳ್ಳುತ್ತದೆ. ಇಲ್ಲಿ ಎಲ್ಲಾ ಮಾಹಿತಿಯನ್ನ ಸರಿಯಾಗಿ ತುಂಬಿದ ನಂತರ REGISTER ಗುಂಡಿಯನ್ನು ಒತ್ತಿ. ನಿಮ್ಮ ಮೊಬೈಲ್‌ಗೆ ಒಂದು ಓಟಿಪಿ ಬರುತ್ತದೆ. ಈ ಓಟಿಪಿ ಉಪಯೋಗಿಸಿಕೊಂಡು ALREADY HAVE AN ACCOUNT? SIGN-IN HERE TO FILL THE APPLICATION ಗುಂಡಿಯನ್ನು ಒತ್ತಿಲಾಗಿನ್ ಮಾಡಿರಿ.

downloaded from: www.kpscvaani.com

**ಹಂತ 3 :** ನಂತರ ಬರುವ ಪುಟದಲ್ಲಿ ನಿಮ್ಮ ವೈಯಕ್ತಿಕ ಮಹಿತಿಯನ್ನು ತುಂಬಿರಿ, ಈ ಪುಟದಲ್ಲಿರುವ ಎಲ್ಲಾ ಮಾಹಿತಿಯನ್ನು ಖಾಲಿಬಿಡದಂತೆ ತುಂಬಬೇಕು. ಹಾಗೆ ತುಂಬಿದ ನಂತರ NEXT ಗುಂಡಿಯನ್ನು ಒತ್ತಿ.

ವಿ.ಸೂ ಒಮ್ಮೆ NEXT ಗುಂಡಿಯನ್ನು ಒತ್ತಿ ಮುಂದುವರಿದ ನಂತರ ನಿಮ್ಮ ವೈಯಕ್ತಿಕ ಮಹಿತಿಯನ್ನು ಬದಲಾಯಿಸಲು ಸಾಧ್ಯವಿರುವುದಿಲ್ಲ. ಅದುದರಿಂದ ನಮೂದಿಸಿದ ವಿವರಗಳನ್ನು ಮತ್ತೊಮ್ಮೆ ಕೂಲಂಕುಷವಾಗಿ ಪರಿಶೀಲಿಸಿಕೊಂಡು, ಎಲ್ಲಾ ವಿವರಗಳು ಸರಿಯಾಗಿರುತ್ತವೆಯೆಂದು ಖಚಿತಪಡಿಸಿಕೊಂಡ ನಂತರ NEXT ಗುಂಡಿಯನ್ನು ಒತ್ತಿ ಮುಂದುವರೆಯಿರಿ.

**ಹಂತ 4 :** ಸಂಬಂಧಪಟ್ಟ ಹುದ್ದೆಯನ್ನು ಆಯ್ಕೆ ಮಾಡಿ APPLY ಗುಂಡಿಯನ್ನು ಒತ್ತಿ ಅರ್ಜಿಯನ್ನು ಭರ್ತಿ ಮಾಡತಕ್ಕದ್ದು. ಅರ್ಜಿಯನ್ನು ಭರ್ತಿ ಮಾಡಿದ ನಂತರ ನಮೂದಿಸಿದ ವಿವರಗಳನ್ನು ಮತ್ತೊಮ್ಮೆ ಕೂಲಂಕುಷವಾಗಿ ಪರಿಶೀಲಿಸಿಕೊಂಡು, ಎಲ್ಲಾ ವಿವರಗಳು ಸರಿಯಾಗಿರುತ್ತವೆಯೆಂದು ಖಚಿತಪಡಿಸಿಕೊಂಡ ನಂತರ CONTINUE TO UPLOAD THE DOCUMENTS ಗುಂಡಿಯನ್ನು ಒತ್ತಿ ಮುಂದುವರೆಯಿರಿ.

**ಹಂತ 5 :** ನಂತರ ಬರುವ ದಾಖಲಾತಿ ಅಪಲೋಡ್ ಪಾರಂನಲ್ಲಿ ಅಭ್ಯರ್ಥಿಗಳು ಸಂಬಂಧಪಟ್ಟ ವಿದ್ಯಾರ್ಹತೆ, ಸೇವಾನುಭವ, ಮೀಸಲಾತಿ ಅಂದರೆ ಜಾತಿ ಪ್ರಮಾಣ ಪತ್ರ, ಅಂಗವಿಕಲ ದೃಢೀಕರಣ ಪತ್ರ, ಕನ್ನಡ ಮಾಧ್ಯಮ, ಮಾಜಿ ಸೈನಿಕ, ಗ್ರಾಮೀಣ ಪ್ರಮಾಣಪತ್ರ, ವಯೋಮಿತಿ ಪ್ರಮಾಣ ಪತ್ರದ **ಝುರಾಕ್ಸ್ ಪ್ರತಿಗಳಿಗೆ ಗೆಜೆಟೆಡ್ ಸರ್ಕಾರಿ ಅಧಿಕಾರಿಯಿಂದ ದೃಢೀಕರಿಸಿ** ಸಂಬಂಧಪಟ್ಟ ಎಲ್ಲಾ ಪ್ರಮಾಣ ಪತ್ರಗಳನ್ನು ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡತಕ್ಕದ್ದು.

**ವಿಶೇಷ ಸೂಚನೆ : ಅಪೂರ್ಣವಾಗಿರುವ, ಫೋಟೋ ಮತ್ತು ಅಭ್ಯರ್ಥಿಯು ಸಹಿ ಮಾಡದೇ ಇರುವ, ಗೆಜೆಟೆಡ್ ಸರ್ಕಾರಿ ಅಧಿಕಾರಿಗಳಿಂದ ದೃಢೀಕರಣ ಇರದೇ ಇರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.**
**ಮೊಬೈಲ್ ಕ್ಯಾಮರ ಸಹಾಯದಿಂದ ಸೆರೆಹಿಡಿದ / ಸ್ಪಷ್ಟತೆ ಇಲ್ಲದಿರುವ ದಾಖಲಾತಿಗಳನ್ನು ಅಪಲೋಡ್ ಮಾಡಿದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.**

**ಹಂತ 6 :** ಸೇವಾನುಭವ ದೃಢೀಕರಣ ಪತ್ರವನ್ನು ಸಲ್ಲಿಸುವವರು ಉದ್ಯೋಗದಾತರಿಂದ ಪಡೆದ ಸೇವಾ ದೃಡೀಕರಣ ಪತ್ರವನ್ನು ಹಾಗೂ ಉದ್ಯೋಗದಾತರಿಂದ ವೇತನವನ್ನು ಪಡೆದಿರುವ ದೃಢೀಕರಣ ಪತ್ರ ಮತ್ತು ಬ್ಯಾಂಕ್ ಸ್ಟೇಟ್‌ಮೆಂಟ್‌ನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡತಕ್ಕದ್ದು.

**ಹಂತ 7 :** ನಂತರ ಅರ್ಜಿ ಶುಲ್ಕವನ್ನು ಪಾವತಿಸುವುದಕ್ಕೆ Genrate challan ಗುಂಡಿಯನ್ನು ಒತ್ತಿ Challan ಪ್ರತಿಯನ್ನು Download ಮಾಡಿಕೊಂಡು ಕರ್ನಾಟಕ ರಾಜ್ಯದಲ್ಲಿನ ಯಾವುದೇ ಇ–ಪಾವತಿ ಅಂಚೆ ಕಛೇರಿಗೆ ಹೋಗಿ, ನಿಗದಿತ ಅರ್ಜಿ ಶುಲ್ಕ + ಸೇವಾ ತೆರಿಗೆಯನ್ನು ಪಾವತಿ ಮಾಡಿ ಅಂತಿಮವಾಗಿ ಪೋಸ್ಟ್ ಆಫೀಸ್ ರಸ್ತಿಯ ಮಹಿತಿಯನ್ನು ಹಾಗು ರಸ್ತಿಯ ಸ್ಕ್ಯಾನ್ ಕಾಪಿಯನ್ನು ಪಾವತಿ ವಿವರದೊಂದಿಗೆ (INV No, Paid Date, Amt, Post Office Name) ಅಪ್ ಲೋಡ್ ಮಾಡಿ ದೃಢಪಡಿಸಿಕೊಳುವುದು.

**ಹಂತ 8 :** ಅರ್ಜಿಯನ್ನು ಪಡೆಯಲು Download ಗುಂಡಿಯನ್ನು ಒತ್ತಿ, ಅಭ್ಯರ್ಥಿಗಳು ಅರ್ಜಿಯ ಪ್ರತಿಯನ್ನು ಕಡ್ಡಾಯವಾಗಿ Download ಮಾಡಿಕೊಳ್ಳತಕ್ಕದ್ದು. ಒಕ್ಕೂಟವು ಅಪೇಕ್ಷಿಸಿದಾಗ ಈ ಪ್ರತಿಯನ್ನು ಹಾಜರುಪಡಿಸಬೇಕು.

downloaded from: www.kpscvaani.com

**ಸೂಚನೆ :** ಶುಲ್ಕವನ್ನು ಪಾವತಿಸಲು ನಿಗದಿಪಡಿಸಿದ ಕೊನೆಯ ದಿನಾಂಕ **21–03–2019** ರ ನಂತರ ಶುಲ್ಕವನ್ನು ಸಂದಾಯ ಮಾಡಲು ಅವಕಾಶವಿರುವುದಿಲ್ಲ. ಡಿ.ಡಿ., ಪೋಸ್ಟಲ್ ಆರ್ಡರ್, ಮನಿ ಆರ್ಡರ್ ಇವುಗಳನ್ನು ಸ್ವೀಕರಿಸಲಾಗುವುದಿಲ್ಲ. ನಿಗದಿತ ಶುಲ್ಕ ಸಂದಾಯ ಮಾಡದ ಅಭ್ಯರ್ಥಿಗಳ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

**ವಿಶೇಷ ಸೂಚನೆ:– On-Line ಮೂಲಕ ಅರ್ಜಿಯನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಯಾವುದಾದರೂ ತಾಂತ್ರಿಕ ತೊಂದರೆ ಅಥವಾ ಸಮಸ್ಯೆ ಎದುರಾದಲ್ಲಿ ಸಹಾಯವಾಣಿ (Help Line) No 9448451165. ಮೂಲಕ ಸಂಪರ್ಕಿಸಿ ಅಗತ್ಯ ಮಾಹಿತಿ ಪಡೆದು ಅರ್ಜಿ ಸಲ್ಲಿಸಬಹುದು.**

ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವಾಗ ಕಡ್ಡಾಯವಾಗಿ ಹಾಜರುಪಡಿಸಬೇಕಾದ ಪ್ರಮಾಣಪತ್ರಗಳ **ಪ್ರತಿಯನ್ನು ಸರ್ಕಾರಿ ಗೆಜೆಟೆಡ್ ಅಧಿಕಾರಿಯಿಂದ** ದೃಢೀಕರಿಸಿ ಅಪ್‌ಲೋಡ್ ಮಾಡತಕ್ಕದ್ದು. ಆದರೆ ಈ ಕೆಳಕಂಡ ಪ್ರಮಾಣ ಪತ್ರಗಳನ್ನು / ದಾಖಲಾತಿಗಳನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಅಂದರೆ, ದಿನಾಂಕ **20–03–2019** ರೊಳಗೆ ಪಡೆದಿರಬೇಕು ಇಲ್ಲವೇ ಸಿಂಧುವಾಗಿರಬೇಕು ಹಾಗೂ ಒಕ್ಕೂಟವು ಪರಿಶೀಲನೆಗಾಗಿ ಹಾಜರುಪಡಿಸಲು ಸೂಚಿಸಿದಾಗ ಅರ್ಜಿಯಲ್ಲಿ ನಮೂದಿಸಿರುವ ಮೀಸಲಾತಿಯ ಪ್ರಮಾಣಪತ್ರಗಳ ಮೂಲ ಪ್ರತಿಗಳನ್ನು ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದ್ದಲ್ಲಿ, ಕೆಳಕಂಡಂತೆ ಕ್ರಮ ಕೈಗೊಳ್ಳಲಾಗುವುದು.

1. ಕಡ್ಡಾಯವಾಗಿ ಹಾಜರುಪಡಿಸಬೇಕಾದ ವಿದ್ಯಾರ್ಹತೆ/ಅನುಭವ/ಜನ್ಮ ದಿನಾಂಕ ಹಾಗೂ ಅಗತ್ಯ ಪ್ರಮಾಣ ಪತ್ರಗಳನ್ನು ಹಾಜರುಪಡಿಸದಿದ್ದಲ್ಲಿ ಅಭ್ಯರ್ಥಿಯ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.
2. ವಿವಿಧ ಮೀಸಲಾತಿ ಕೋರಿ ಹಾಜರು ಪಡಿಸಬೇಕಾದ ಪ್ರಮಾಣಪತ್ರಗಳನ್ನು ಹಾಜರುಪಡಿಸದಿದ್ದಲ್ಲಿ, ಆ ಮೀಸಲಾತಿಯನ್ನು ರದ್ದುಪಡಿಸಿ ಸಾಮಾನ್ಯ ಅರ್ಹತೆಯಲ್ಲಿ ಅರ್ಹತೆಯನ್ನು ಹೊಂದಿದ್ದಲ್ಲಿ ಮಾತ್ರ, ಸಾಮಾನ್ಯ ಅರ್ಹತೆ ಅಭ್ಯರ್ಥಿಯೆಂದು ಪರಿಗಣಿಸಲಾಗುವುದು.

**ಮೌಖಿಕ ಸಂದರ್ಶನದ ವೇಳೆ / ಒಕ್ಕೂಟವು ಯಾವುದೇ ಸಂದರ್ಭದಲ್ಲಿ ಪರಿಶೀಲನೆಗೆ ಸೂಚಿಸಿದಾಗ ಕಡ್ಡಾಯವಾಗಿ ಹಾಜರುಪಡಿಸಬೇಕಾದ ಮೂಲ ಪ್ರಮಾಣಪತ್ರಗಳು :**

1. ವಿವಿಧ ಹುದ್ದೆಗಳಿಗೆ ನಿಗದಿಪಡಿಸಲಾದ ವಿದ್ಯಾರ್ಹತೆಯ / ಎಲ್ಲಾ ಸೆಮಿಸ್ಟರ್‌ಗಳ / ವರ್ಷಗಳ ಪ್ರಮಾಣಪತ್ರಗಳು ಅಥವಾ ಅಂಕಪಟ್ಟಿಗಳು.

ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣಪತ್ರ / ಜನ್ಮ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉದ್ಧೃತ ಭಾಗ (ExtractofCumulativeRecord) / ಜನನ ಪ್ರಮಾಣಪತ್ರ

2. ವಿವಿಧ ಮೀಸಲಾತಿಗಳನ್ನು ಕೋರಿದ್ದಲ್ಲಿ, ಮೀಸಲಾತಿ ಪ್ರಮಾಣಪತ್ರಗಳು.
3. ಸೇವಾನುಭವ ಪ್ರಮಾಣಪತ್ರ ಮತ್ತು ವೇತನ ಪಡೆದಿರುವ ಬಗ್ಗೆ ವೇತನ ಪ್ರಮಾಣಪತ್ರ ಮತ್ತು ಬ್ಯಾಂಕ್ ಸ್ಟೇಟ್‌ಮೆಂಟ್.
4. ಕಂಪ್ಯೂಟರ್ ನಿರ್ವಹಣೆಯಲ್ಲಿ ಸಂಬಂಧಪಟ್ಟ ಹುದ್ದೆಗಳಿಗೆ ನಿಗದಿಪಡಿಸಿರುವಂತೆ ಜ್ಞಾನ ಹೊಂದಿರುವ ಪ್ರಮಾಣಪತ್ರಗಳು
5. ಅಭ್ಯರ್ಥಿಗಳು ಸಹಕಾರ ವಿಷಯದಲ್ಲಿ ಪದವಿ /ಸ್ನಾತಕೋತ್ತರ ಪದವಿ / ಡಿಪ್ಲೋಮಾ ಹೊಂದಿದ್ದಲ್ಲಿ ಸಂಬಂಧಿಸಿದ ಪ್ರಮಾಣ ಪತ್ರಗಳು / ಅಂಕಪಟ್ಟಿಗಳು
6. ಅಭ್ಯರ್ಥಿಗಳು ವ್ಯಾಸಂಗ ಮಾಡಿದ ವಿದ್ಯಾ ಸಂಸ್ಥೆಗಳಿಂದ ಪಡೆದ ನಡತೆ ಪ್ರಮಾಣಪತ್ರ.

**ಮೀಸಲಾತಿ ಹಾಗೂ ವಯೋಮಿತಿ ರಿಯಾಯಿತಿ ಕೋರಿದಲ್ಲಿ ಹಾಜರುಪಡಿಸಬೇಕಾದ ಪ್ರಮಾಣಪತ್ರಗಳು :**

1. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1, ಪ್ರವರ್ಗ–2ಎ, ಪ್ರವರ್ಗ–2ಬಿ, ಪ್ರವರ್ಗ–3ಎ, ಪ್ರವರ್ಗ–3ಬಿ ಮೀಸಲಾತಿ ಅಭ್ಯರ್ಥಿಗಳು ನಮೂನೆ ಡಿ/ಇ/ಎಫ್ ನಲ್ಲಿ ತಹಶೀಲ್ದಾರ ರವರಿಂದ ಪಡೆದಿರುವ ಪ್ರಮಾಣಪತ್ರ.
2. ಗ್ರಾಮೀಣ ಮೀಸಲಾತಿ ಪ್ರಮಾಣಪತ್ರ ನಮೂನೆ 2 ರಲ್ಲಿ
3. ಅಂಗವಿಕಲ ಅಭ್ಯರ್ಥಿಗಳು ನಿಗದಿಪಡಿಸಿದ ನಮೂನೆಯಲ್ಲಿ ಪಡೆದ ವೈದ್ಯಕೀಯ ಪ್ರಮಾಣಪತ್ರ
4. ಕನ್ನಡ ಮಾಧ್ಯಮ ಅಭ್ಯರ್ಥಿಗಳು ನಿಗದಿಪಡಿಸಿದ ನಮೂನೆಯಲ್ಲಿ ಪಡೆದ ಪ್ರಮಾಣಪತ್ರ

downloaded from: www.kpscvaani.com

**ಪ್ರಮುಖ ಸೂಚನೆಗಳು :**

1. ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಗಳಲ್ಲಿ ನೀಡುವ ಮಾಹಿತಿಗಳ ಆಧಾರದ ಮೇಲೆ ಅವರುಗಳು ಲಿಖಿತ ಪರೀಕ್ಷೆಗೆ ಅರ್ಹರೆ ಎಂಬುದನ್ನು ಒಕ್ಕೂಟವು ಪರಿಶೀಲಿಸಿ ಮೇಲು ನೋಟಕ್ಕೆ ಅರ್ಹರೆಂದು ಕಂಡುಬಂದ ಅಭ್ಯರ್ಥಿಗಳಿಗೆ ಮಾತ್ರ ಲಿಖಿತ ಪರೀಕೆಗೆ ಕರೆ ಪತ್ರಗಳನ್ನು ನೀಡುತ್ತದೆ. ಆದ್ದರಿಂದ ನಿಗದಿಪಡಿಸಿರುವ ವಯೋಮಿತಿ, ವಿದ್ಯಾರ್ಹತೆ, ಅನುಭವ, ಮೀಸಲಾತಿ ಇತ್ಯಾದಿಗಳಿಗೆ ಅನುಗುಣವಾಗಿ ಅರ್ಜಿಯಲ್ಲಿ ಸರಿಯಾದ ಮಾಹಿತಿ ನೀಡುವುದು ಅಭ್ಯರ್ಥಿಗಳ ಜವಾಬ್ದಾರಿಯಾಗಿರುತ್ತದೆ.
2. ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅಭ್ಯರ್ಥಿಯು ಅರ್ಜಿಯಲ್ಲಿ ನಮೂದಿಸುವ ಮೀಸಲಾತಿ, ಜನ್ಮ ದಿನಾಂಕ, ವಿದ್ಯಾರ್ಹತೆ, ಅನುಭವ ಹಾಗೂ ವಯೋಮಿತಿ ಸಡಿಲಿಕೆ ಇತ್ಯಾದಿ ವಿವರಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗುವುದು ಹಾಗೂ ಈ ಬಗ್ಗೆ ಅನಂತರದಲ್ಲಿ ಬದಲಾವಣೆ ಕುರಿತಂತೆ ಸಲ್ಲಿಸುವ ಯಾವುದೇ ಕೋರಿಕೆ ಪತ್ರಗಳನ್ನು ಪುರಸ್ಕರಿಸಲಾಗುವುದಿಲ್ಲ.
3. ಅಭ್ಯರ್ಥಿಗಳು ವಿದ್ಯಾರ್ಹತೆ, ಅನುಭವ, ಮೀಸಲಾತಿ, ವಯೋಮಿತಿ ಮುಂತಾದ ಅವಶ್ಯಕ ದಾಖಲೆಗಳನ್ನು **ಸರ್ಕಾರಿ ಗೆಜೆಟೆಡ್ ಅಧಿಕಾರಿಗಳಿಂದ** ದೃಢೀಕರಿಸಿದ ಪ್ರತಿಗಳನ್ನು ಆನ್–ಲೈನ್‌ನಲ್ಲಿ ಅಪ್‌ಲೋಡ್ ಮಾಡುವುದು ಕಡ್ಡಾಯವಾಗಿರುತ್ತದೆ.
   **ಅಪೂರ್ಣವಾಗಿರುವ, ಫೋಟೋ ಮತ್ತು ಅಭ್ಯರ್ಥಿಯು ಸಹಿ ಮಾಡದೇ ಇರುವ, ಸರ್ಕಾರಿ ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಣ ಇಲ್ಲದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.**
4. ಸೇವೆಯಲ್ಲಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬೇಕಾದಲ್ಲಿ ಸಂಬಂಧಿಸಿದ ನೇಮಕಾತಿ ಪ್ರಾಧಿಕಾರದಿಂದ ನಿರಾಕ್ಷೇಪಣಾ (No Objection Certificate) ಪತ್ರವನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗಾಗಿ ಪಡೆದು ಸಲ್ಲಿಸತಕ್ಕದ್ದು. (ನಮೂನೆಯನ್ನು ನೇಮಕಾತಿ ಪ್ರಕಟಣೆಯ ಕೊನೆಯಲ್ಲಿ ಅನುಬಂಧದಲ್ಲಿ ನೀಡಲಾಗಿದೆ.)
5. ಅಭ್ಯರ್ಥಿಗಳು ತಮ್ಮ ಮಾಹಿತಿಗಾಗಿ ಭರ್ತಿ ಮಾಡಿ ಸಲ್ಲಿಸಿದ ಅರ್ಜಿಯ ಒಂದು ಫೋಟೋ ಪ್ರತಿಯನ್ನು ಕಡ್ಡಾಯವಾಗಿ ತಮ್ಮೊಂದಿಗೆ ಇಟ್ಟುಕೊಳ್ಳಲು ಸೂಚಿಸಿದೆ.

**ಲಿಖಿತ ಪರೀಕ್ಷೆಗೆ ಪತ್ರ :**

ಒಕ್ಕೂಟವು ಲಿಖಿತ ಪರೀಕ್ಷೆಗೆ ಅರ್ಹವಿರುವ ಅಭ್ಯರ್ಥಿಗಳ ಪಟ್ಟಿಯನ್ನು ಹಾಗೂ ಲಿಖಿತ ಪರೀಕ್ಷೆಯ ದಿನಾಂಕವನ್ನು ಒಕ್ಕೂಟದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು ಮತ್ತು ಅರ್ಹ ಅಭ್ಯರ್ಥಿಗಳು ಲಿಖಿತ ಪರೀಕ್ಷೆ ಕರೆ ಪತ್ರಗಳನ್ನು ಒಕ್ಕೂಟದ ಜಾಲತಾಣದಿಂದ ಡೌನ್‌ಲೋಡ್ ಮಾಡಿಕೊಳ್ಳುವುದು.

**ಒಕ್ಕೂಟದೊಡನೆ ಪತ್ರ ವ್ಯವಹಾರ :**

ಒಕ್ಕೂಟವು ಅಭ್ಯರ್ಥಿತ್ವದ ವಿಚಾರದಲ್ಲಿ ಅಭ್ಯರ್ಥಿಗಳೊಂದಿಗೆ ಯಾವುದೇ ಪತ್ರ ವ್ಯವಹಾರವನ್ನು ನಡೆಸುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ **(ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.30 ಗಂಟೆಯವರೆಗೆ)** ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆಗಳು

ಸಹಾಯವಾಣಿ (Helpline)

ಒಕ್ಕೂಟದ ಕೇಂದ್ರ ಕಛೇರಿ ಮಾಹಿತಿ ಕೇಂದ್ರ : **08226-234848**

**ಸೇವಾ ಸೌಲಭ್ಯಗಳನ್ನು ನೀಡುವ ಬಗ್ಗೆ**

1. ಒಕ್ಕೂಟದ ಹುದ್ದೆಗಳಿಗೆ ಆಯ್ಕೆಯಾಗುವ ಅಭ್ಯರ್ಥಿಗಳಿಗೆ ಪಿಂಚಣಿ ಸೌಲಭ್ಯವಿರುವುದಿಲ್ಲ.
2. ಒಕ್ಕೂಟದ ಹುದ್ದೆಗಳಿಗೆ ಆಯ್ಕೆಯಾಗುವಅಭ್ಯರ್ಥಿಗಳಿಗೆ ಒಕ್ಕೂಟದ ಅನುಮೋದಿತ ಸೇವಾ ನಿಯಮಗಳು ಹಾಗೂ ವೃಂದ ಮತ್ತು ನೇಮಕಾತಿ ನಿಯಮಗಳು ಅನ್ವಯಿಸುತ್ತವೆ.
3. ನೇಮಕಾತಿ ಹೊಂದಿದ ನಂತರ ಮರಣ ಹೊಂದಿದಲ್ಲಿ ಮೃತರ ಅವಲಂಬಿತರಿಗೆ ಅನುಕಂಪದ ಆಧಾರದ ಮೇರೆಗೆ ಉದ್ಯೋಗ ನೀಡುವುದಿಲ್ಲ. ಅನುಕಂಪದ ಆಧಾರಿತ ನೇಮಕಾತಿ ನಿಯಮಗಳು ಅನ್ವಯಿಸುವುದಿಲ್ಲ.
4. ಒಕ್ಕೂಟದ ಹುದ್ದೆಗಳಿಗೆ ಆಯ್ಕೆಯಾಗುವ ಅಭ್ಯರ್ಥಿಗಳು ನೇಮಕಾತಿ ಪ್ರಕಟಣೆಯಲ್ಲಿ ತಿಳಿಸಿದ ವೇತನಶ್ರೇಣಿಯಲ್ಲಿ ಸೇವಾ ಸೌಲಭ್ಯವನ್ನು ಪಡೆಯಲು ಮಾತ್ರ ಅರ್ಹರಾಗಿರುತ್ತಾರೆ.
5. ಆಯ್ಕೆಯಾಗುವ ಅಭ್ಯರ್ಥಿಗಳು ಎಲ್ಲಾ ಪಾಳಿಗಳಲ್ಲೂ ಕರ್ತವ್ಯ ನಿರ್ವಹಿಸಬೇಕು.

downloaded from: www.kpscvaani.com

6. ಒಕ್ಕೂಟದ ಹಿತದೃಷ್ಟಿಯಿಂದ ಒಕ್ಕೂಟದ ವ್ಯಾಪ್ತಿಯನ್ನು ಹೊರತುಡಪಸಿದ ಸ್ಥಳಗಳಿಗೂ ಸಹ ಅಭ್ಯರ್ಥಿಗಳನ್ನು ನಿಯೋಜಿಸಹುದಾದ ಹಕ್ಕನ್ನು ಒಕ್ಕೂಟ ಹೊಂದಿರುತ್ತದೆ.

**ದುರ್ನಡತೆ :**

ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ನಡೆಸಲಾದ ಸಂದರ್ಶನದಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಅನುಸರಿಸಲು ಪ್ರಯತ್ನಿಸುತ್ತಿರುವನೆಂದು ಅಥವಾ ಅವರ ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೇ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು ಕಂಡುಬಂದಲ್ಲಿ ಅವನು/ಅವಳು ಸ್ವತಃ ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ, ಹುದ್ದೆಯ ಸಂದರ್ಶನದಿಂದ / ಆಯ್ಕೆಯಿಂದ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು. ಮುಂದೆ ಒಕ್ಕೂಟವು ನೇಮಕಾತಿ ಮಾಡುವ ಯಾವುದೇ ಹುದ್ದೆಯ ಆಯ್ಕೆಗೆ ಖಾಯಂ ಆಗಿ ಡಿಬಾರ್ ಮಾಡಲಾಗುವುದು.

**ನಿರ್ಬಂಧ :**

1. ಯಾವುದೇ ನಿಷೇಧಿತ ಸಂಘ ಸಂಸ್ಥೆಯ ಸದಸ್ಯನಾಗಿರುವಲ್ಲಿ ಅಥವಾ ಸದಸ್ಯನಾಗಿದ್ದಲ್ಲಿ ಅಥವಾ ಯಾವುದೇ ನಿಷೇಧಿತ ಸಂಸ್ಥೆಯ ಕಾರ್ಯಚಟುವಟಿಕೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಲ್ಲಿ.
2. ಭಾರತ ಸಂವಿಧಾನಕ್ಕೆ ಚ್ಯುತಿ ತರುವ ಕಾರ್ಯದಲ್ಲಿ ಪ್ರವತ್ತನಾದಲ್ಲಿ.
3. ಕಾನೂನು ಭಂಗ ಮಾಡಿ ಹಿಂಸಾಕೃತ್ಯದಲ್ಲಿ ತೊಡಗಿಕೊಂಡಿದ್ದಲ್ಲಿ.
4. ಭಾರತ ದೇಶದ ಸಾರ್ವಭೌಮ ಹಾಗೂ ಸುಭದ್ರತೆಗೆ ಧಕ್ಕೆ ತರುವ ಕಾರ್ಯದಲ್ಲಿ ತೊಡಗಿಕೊಂಡಿದ್ದಲ್ಲಿ.
5. ಭಾರತ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಸೇವೆಯಿಂದ ಉಚ್ಚಾಟನೆಗೊಂಡಿದ್ದಲ್ಲಿ,
6. ವ್ಯಕ್ತಿಯು ಕಾನೂನುಬಾಹಿರ ಕೃತ್ಯಗಳಲ್ಲಿ ತೊಡಗಿ ಅಪರಾಧಕ್ಕೆ ಒಳಗಾದ ಪ್ರಸಂಗಗಳಲ್ಲಿ, ಒಬ್ಬ ಜೀವಂತ ಪತ್ನಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವ ಪುರುಷ ಅಭ್ಯರ್ಥಿಯು ಮತ್ತು ಈಗಾಗಲೇ ಇನ್ನೊಬ್ಬ ಹೆಂಡತಿಯಿರುವ ವ್ಯಕ್ತಿಯನ್ನು ವಿವಾಹವಾಗಿರುವ ಮಹಿಳಾ ಅಭ್ಯರ್ಥಿಯು ನೇಮಕಾತಿಗೆ ಅರ್ಹರಿರುವುದಿಲ್ಲ.

**ಸಹಿ/–**

**ವ್ಯವಸ್ಥಾಪಕ ನಿರ್ದೇಶಕರು**

downloaded from: www.kpscvaani.com

## <u>ಅನುಬಂಧ</u>

## (ಪ.ಜಾ / ಪ.ಪಂ ಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ)

## ನಮೂನೆ – ಡಿ

(ನಿಯಮ 3ಎ (2) (3) ನೋಡಿ)

**ಅನುಸೂಚಿತ ಅಥವಾ ಅನುಸೂಚಿತ ಬುಡಕಟ್ಟುಗಳಿಗೆ (ಪ.ಜಾ/ಪ.ಪಂ) ಸೇರಿದ ಅಭ್ಯರ್ಥಿಗಳಿಗೆ ನೀಡುವ ಪ್ರಮಾಣ ಪತ್ರಗಳ ನಮೂನೆ**

## ಪ್ರಮಾಣ ಪತ್ರ

............................................................ ರಾಜ್ಯದ / ಕೇಂದ್ರಾಡಳಿತ ಪ್ರದೇಶದ * ................................ ಜಿಲ್ಲೆಯ / ವಿಭಾಗದ ................................................. ಗ್ರಾಮ / ಪಟ್ಟಣದ * ನಿವಾಸಿಯಾದ ಶ್ರೀ / ಶ್ರೀಮತಿ ................................. ಎಂಬುವವರ ಮಗ / ಮಗಳಾದ ಶ್ರೀ / ಶ್ರೀಮತಿ .................................. ಇವರು ಅನುಸೂಚಿತ ಜಾತಿ/ಅನುಸೂಚಿತ ಬುಡಕಟ್ಟು * ಎಂದು ಮಾನ್ಯ ಮಾಡಲಾಗಿರುವ ಜಾತಿ/ಬುಡಕಟ್ಟಿಗೆ * ಸೇರಿರುತ್ತಾರೆಂದು ಪ್ರಮಾಣಿಕರಿಸಿದೆ.

- ಸಂವಿಧಾನ (ಅನುಸೂಚಿತ ಜಾತಿಗಳು) ಆದೇಶ, 1950
- ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) ಆದೇಶ, 1950
- ಸಂವಿಧಾನ (ಅನುಸೂಚಿತ ಜಾತಿ) (ಕೇಂದ್ರಾಡಳಿತ ಪ್ರದೇಶಗಳು) ಆದೇಶ, 1950
- ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) (ಕೇಂದ್ರಾಡಳಿತ ಪ್ರದೇಶಗಳು) ಆದೇಶ, 1951

(ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಪಟ್ಟಿ (ಮಾರ್ಪಾಡು) ಆದೇಶ 1956, ಮುಂಬಯಿ ತಾಜ್ಯ ಪುನರ್ ರಚನಾ ಅಧಿನಿಯಮ, 1960, ಪಂಜಾಬ್ ರಾಜ್ಯ ಪುನರ್ ರಚನಾ ಅಧಿನಿಯಮ, 1966, ಹಿಮಾಚಲ ಪ್ರದೇಶ ರಾಜ್ಯ ಅಧಿನಿಯಮ, 1970 ಮತ್ತು ಈಶಾನ್ಯ ಪ್ರದೇಶಗಳ (ಪುನರ್ ರಚನಾ ಅಧಿನಿಯಮ, 1971ರ ಮೂಲ ತಿದ್ದುಪಡಿಯಾದಂತೆ)

- ಸಂವಿಧಾನ
- ಸಂವಿಧಾನ (ಜಮ್ಮು ಮತ್ತು ಕಾಶ್ಮೀರ) ಅನುಸೂಚಿತ ಜಾತಿಗಳ ಆದೇಶ, 1956
- ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ (ತಿದ್ದುಪಡಿ) ಅಧಿನಿಯಮ, 1976ರ ಮೂಲಕ ತಿದ್ದುಪಡಿಯಾದಂತೆ ಸಂವಿಧಾನ (ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ) ಅನುಸೂಚಿತ ಬುಡಕಟ್ಟುಗಳ ಆದೇಶ, 1959.
- ಸಂವಿಧಾನ (ದಾದರ್ ಮತ್ತು ನಾಗರಹವೇಲಿ) ಅನುಸೂಚಿತ ಜಾತಿಗಳ ಆದೇಶ 1962
- ಸಂವಿಧಾನ (ಪಾಂಡಿಚೇರಿ) ಅನುಸೂಚಿತ ಜಾತಿಗಳ ಆದೇಶ, 1964
- ಸಂವಿಧಾನ (ಅನುಸೂಚಿತ ಬುಡಕಟ್ಟುಗಳ) (ಉತ್ತರ ಪ್ರದೇಶ) ಆದೇಶ, 1967
- ಸಂವಿಧಾನ (ಗೋವಾ, ದಮನ್ ಮತ್ತು ದೀವ್) ಅನುಸೂಚಿತ ಜಾತಿ/ಬುಡಕಟ್ಟುಗಳ ಆದೇಶ 1988
- ಸಂವಿಧಾನ (ನಾಗಾಲ್ಯಾಂಡ್) ಅನುಸೂಚಿತ ಬುಡಕಟ್ಟುಗಳ ಆದೇಶ

2. ಶ್ರೀ/ಶ್ರೀಮತಿ/ಕುಮಾರಿ * ........................................................... ಮತ್ತು / ಅಥವಾ ಅವನ* / ಅವಳ* ಕುಟುಂಬವು ..................................................................................................ರಾಜ್ಯ/ಕೇಂದ್ರಾಡಳಿತ ಪ್ರದೇಶದ ................................................................. ಜಿಲ್ಲಾ/ವಿಭಾಗದ ........................................ಗ್ರಾಮ/ಪಟ್ಟಣದ ಸಾಮಾನ್ಯ ನಿವಾಸಿ (ಗಳು)

ಸಹಿ.........................................................

ತಹಶೀಲ್ದಾರ್.........................................

ಸ್ಥಳ : ಪದನಾಮ

ದಿನಾಂಕ: ಕಛೇರಿಯ ಮೊಹರಿನೊಂದಿಗೆ

downloaded from: www.kpscvaani.com

**(ಪ್ರವರ್ಗ–1 ಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ)**
**ನಮೂನೆ – ಇ**
**(ನಿಯಮ 3ಎ (2) (3) ನೋಡಿ)**

**ಹಿಂದುಳಿದ ವರ್ಗಗಳಿಗೆ (ಪ್ರವರ್ಗ–1) ಸೇರಿದ ಅಭ್ಯರ್ಥಿಗಳಿಗೆ ನೀಡುವ ಪ್ರಮಾಣ ಪತ್ರ**

**_______________________________________________________ಗ್ರಾಮ / ಪಟ್ಟಣದ / ನಗರ ನಿವಾಸಿಯಾದ ಶ್ರೀ / ಶ್ರೀಮತಿ ___________________________________________________ಇವರ ಮಗ / ಮಗಳು / ಪತ್ನಿ / ಪತಿಯಾದ ಶ್ರೀ / ಶ್ರೀಮತಿ _____________________________________ ಇವರು ಹಿಂದುಳಿದ ವರ್ಗಗಳ (ಪ್ರವರ್ಗ) ___________________________ಜಾತಿಯ _________________ ಉಪಜಾತಿಗೆ ಸೇರಿರುತ್ತಾರೆಂದು ಪ್ರಮಾಣಿಕರಿಸಲಾಗಿದೆ.**

**ಸ್ಥಳ :** | **ತಹಶೀಲ್ದಾರ್**
**ದಿನಾಂಕ :** | **ತಾಲ್ಲೂಕು ಕಛೇರಿಯ ಮೊಹರು**

downloaded from: www.kpscvaani.com

## (ಪ್ರವರ್ಗ – 2ಎ, 2ಬಿ, 3ಎ, 3ಬಿ ಗೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ)

## ನಮೂನೆ – ಎಫ್

(ನಿಯಮ 3ಎ (2) (3)ನ್ನು ನೋಡಿ)

**ಹಿಂದುಳಿದ ವರ್ಗಗಳಿಗೆ (2ಎ, 2ಬಿ. 3ಎ, 3ಬಿ) ಸೇರಿದ ಅಭ್ಯರ್ಥಿಗೆ ನೀಡುವ ಆದಾಯ ಮತ್ತು ಜಾತಿ ಪ್ರಮಾಣ ಪತ್ರ**

ರಲ್ಲಿ ವಾಸವಾಗಿರುವ ಶ್ರೀ / ಶ್ರೀಮತಿ ಇವರ ಮಗ / ಮಗಳು / ಪತಿ / ಪತ್ನಿಯಾದ ಶ್ರೀ / ಶ್ರೀಮತಿ / ಕುಮಾರಿ ಇವರು ಮತ್ತು ಆತನ / ಅವಳ ತಂದೆ / ತಾಯಿ / ಪೋಷಕರು / ಪತ್ನಿ / ಪತಿಯು, ಸರ್ಕಾರಿ ಆದೇಶಗಳ ಸಂಖ್ಯೆ:ಎಸ್‌ಡಬ್ಲ್ಯೂಡಿ 225 ಬಿಸಿಎ 2000 ದಿನಾಂಕ: 30.03.2002 ರಲ್ಲಿ ನಿರ್ದಿಷ್ಟ ಪಡಿಸಿದ ಮೇಲುಸ್ತರದ (ಕ್ರೀಮಿ ಲೇಯರ್) ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು;

ಅಭ್ಯರ್ಥಿಯಾಗಲಿ ಅಥವಾ ಆತನ / ಆಕೆಯ ತಂದೆ ತಾಯಿ / ಪೋಷಕರಾಗಲಿ / ಪತ್ನಿ / ಪತಿಯಾಗಲಿ, ಸರ್ಕಾರದ ಸೇವೆಯಲ್ಲಿ 1 ನೇ ದರ್ಜೆಯ ಅಥವಾ 2ನೇ ದರ್ಜೆಯ ಅಧಿಕಾರಿಯಾಗಿಲ್ಲವೆಂದು;

*ಅಥವಾ*

ಸಾರ್ವಜನಿಕ ವಲಯ ಉದ್ಯಮಯಲ್ಲಿ ತತ್ಸಮಾನವಾದ ಹುದ್ದೆಯನ್ನು ಹೊಂದಿರುವುದಿಲ್ಲ;

*ಅಥವಾ*

ಖಾಸಗಿ ನಿಯೋಜಕರ ಕೈಕೆಳಗೆ, 2ನೇ ದರ್ಜೆಯ ಅಧಿಕಾರಿಯ ಸಂಬಳಕ್ಕಿಂತ (ವೇತನ ಶ್ರೇಣಿ ರೂ.6000–12000/– ಪ್ರಾರಂಭಿಕ ಹಂತ) ಕಡಿಮೆಯಲ್ಲದ ಸಂಬಳವನ್ನು ಪಡೆಯುವ ನೌಕರನಾಗಿಲ್ಲವೆಂದು;

*ಅಥವಾ*

ಆತನ / ಅಕೆಯ ತಂದೆ ತಾಯಿ/ ಪೋಷಕರು / ಪತ್ನಿ / ಪತಿಯ ಆದಾಯವು ಎರಡು ಲಕ್ಷಮೀರುವುದಿಲ್ಲವೆಂದು;

**ಅಥವಾ**

ಕರ್ನಾಟಕ ಭೂ ಸುಧಾರಣಾ ಅಧಿನಿಯಮ 1961 ರಲ್ಲಿ ನಿಗದಿಪಡಿಸಿರುವಂತೆ ಆತನ / ಆಕೆಯ ತಂದೆ ತಾಯಿ / ಪೋಷಕರು / ಪತ್ನಿ / ಪತಿಯು ಮಾರಾಟ ತೆರಿಗೆದಾರನಲ್ಲ ಅಥವಾ ಆತನ / ಆಕೆಯ ತಂದೆ ತಾಯಿ / ಪೋಷಕ / ಪತ್ನಿ / ಪತಿಯು ಅಥವಾ ಇವರಿಬ್ಬರೂ 10 ಯುನಿಟ್‌ಗಿಂತ ಹೆಚ್ಚಿನ ಕೃಷಿ ಭೂಮಿ ಅಥವಾ 25 ಎಕರೆಗಳಿಗಿಂತ ಹೆಚ್ಚಿನ ಪ್ಲಾಂಟೇಶನ್ ಭೂಮಿಯನ್ನು ಹೊಂದಿರುವುದಿಲ್ಲವೆಂದು ಪ್ರಮಾಣೀಕರಿಸಲಾಗಿದೆ. ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಡಿ 225 ಬಿಸಿಎ 2000 ದಿನಾಂಕ: 30.03.2002ರ ಅನ್ವಯ ಶ್ರೀ / ಶ್ರೀಮತಿ / ಕುಮಾರಿ ಇವರು ಜಾತಿಗೆ ಸೇರಿದ ಉಪಜಾತಿಯವರಾಗಿದ್ದು ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲ್ಯೂಡಿ 225 ಬಿಸಿಎ 2000 ದಿನಾಂಕ: 30.03.2002ರ ಅನ್ವಯ ಹಿಂದುಳಿದ ವರ್ಗಗಳ ಪ್ರವರ್ಗ (2ಎ, 2ಬಿ, 3ಎ, 3ಬಿ)ಕ್ಕೆ ಸೇರಿರುತ್ತಾರೆ.

**ಸ್ಥಳ :** **ತಹಶೀಲ್ದಾರ್**
**ದಿನಾಂಕ:** **__________ತಾಲ್ಲೂಕು**
**ಕಛೇರಿಯ ಮೊಹರು**

**ಸೂಚನೆ:**

1) **ಸರ್ಕಾರದ ಆದೇಶ ಸಂಖ್ಯೆ: ಹಿಂವಕ 148 ಬಿಸಿಎ 2015, ದಿನಾಂಕ: 04–06–2015ರಂತೆ ಹಿಂದುಳಿದ ವರ್ಗಗಳ ಪ್ರವರ್ಗ–2ಎ, 2ಬಿ, 3ಎ ಮತ್ತು 3ಬಿ ಮೀಸಲಾತಿಗಳಿಗೆ ಅನ್ವಯಿಸುವಂತೆ ಕೆನೆಪದರಕ್ಕೆ ನಿಗದಿಪಡಿಸಿರುವ ಅಭ್ಯರ್ಥಿಯ ಮತ್ತು ಅವರ ತಂದೆ–ತಾಯಿ, ಪೋಷಕರ ವಾರ್ಷಿಕ ಒಟ್ಟು ಆದಾಯ ಮಿತಿಯನ್ನು (Gross Annual Income) ‘ 4.50 ಲಕ್ಷಗಳಿಂದ ‘ 6.00 ಲಕ್ಷಗಳಿಗೆ ಹೆಚ್ಚಿಸಲಾಗಿದೆ. ಆದುದರಿಂದ, ಮೀಸಲಾತಿ ಪ್ರಮಾಣಪತ್ರವನ್ನು ನೀಡುವ ಅಧಿಕೃತ ಅಧಿಕಾರಿಯು ದಿನಾಂಕ: 04–06–2015ರ ಸರ್ಕಾರಿ ಆದೇಶದಲ್ಲಿನ ಅಂಶಗಳನ್ನು ವಿವರವಾಗಿ ಖಚಿತಪಡಿಸಿಕೊಂಡ ನಂತರವೇ ನೀಡತಕ್ಕದ್ದು.**
2) **ಈ ಮೇಲೆ ಹೇಳಲಾದ ಸರ್ಕಾರಿ ಆದೇಶದಲ್ಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡೇ ಸದರಿ ಮೀಸಲಾತಿಗಳನ್ನು ಕ್ಲೇಮು ಮಾಡುವ ಅಭ್ಯರ್ಥಿಗಳು ಅದರಂತೆ ಜಾತಿ/ ಮೀಸಲಾತಿ ಪ್ರಮಾಣ ಪತ್ರಗಳನ್ನು ಮಾಡಿಸಲು ಸೂಚಿಸಿದೆ.**

downloaded from: www.kpscvaani.com

## ನಮೂನೆ – 2
## ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ

ಶ್ರೀ/ಶ್ರೀಮತಿ ರವರ ಮಗ/ ಮಗಳು/ ಪತಿ/ ಪತ್ನಿ/ ಶ್ರೀ/ಶ್ರೀಮತಿ/ಕುಮಾರಿ ಜಿಲ್ಲೆ ತಾಲ್ಲೂಕು ಗ್ರಾಮದಲ್ಲಿ ವಾಸವಾಗಿರುವ ಇವರು ಒಂದನೇ ತರಗತಿಯಿಂದ ತರಗತಿಯವರೆಗೆ ಜಿಲ್ಲೆ ತಾಲ್ಲೂಕು ಪಟ್ಟಣ ಶಾಲೆಯಲ್ಲಿ ವ್ಯಾಸಂಗ ಮಾಡಿ ವರ್ಷ ನಡೆದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ಈ ಶಾಲೆಯು ಅಭ್ಯರ್ಥಿಯು ವ್ಯಾಸಂಗ ಮಾಡಿದ ಅವಧಿಯಲ್ಲಿ ಕರ್ನಾಟಕ ಪೌರ ನಿಗಮಗಳ ಅಧಿನಿಯಮ, 1976 ಅಥವಾ ಕರ್ನಾಟಕ ಪೌರ ಸಭೆಗಳ ಅಧಿನಿಯಮ 1964ರ ಅಡಿಯಲ್ಲಿ ನಿರ್ದಿಷ್ಟಪಡಿಸಿ ಒಂದು ದೊಡ್ಡ ನಗರ ಪ್ರದೇಶ ಸಣ್ಣ ನಗರ ಪ್ರದೇಶ ಅಥವಾ ಪರಿವರ್ತನೆ ಹಂತದಲ್ಲಿರುವ ಪ್ರದೇಶಗಳ ಹೊರತಾದ ಪ್ರದೇಶದಲ್ಲಿತ್ತು.

| | |
|---|---|
| ಮೇಲು ರುಜು | ಸಹಿ |
| ಕ್ಷೇತ್ರ ಶಿಕ್ಷಣ ಅಧಿಕಾರಿ | ಮುಖ್ಯೋಪಾಧ್ಯಾಯರ ಸಹಿ |
| ಕಛೇರಿಯ ಮೊಹರು | ಮತ್ತು ಸಂಸ್ಥೆಯ ಮೊಹರು |

ಸ್ಥಳ :
ದಿನಾಂಕ :

downloaded from: www.kpscvaani.com

**ಕರ್ನಾಟಕ ಸರ್ಕಾರದ ಅಧಿಕೃತ ಜ್ಞಾಪನಾ ಸಂಖ್ಯೆ: ಸಿಆಸುಇ : 115 : ಸೇನೆನಿ : 2005 ದಿನಾಂಕ**

## CERTIFICATE FOR THE PERSONS WITH DISABILITIES

This is to certify that Sri / Smt / Kum ……………………………………… son / wife / daughter of Shri …………………………………………….. Age…………………………….. old, male / female, Registration No…………………. is a case of ……………………… He / She is physically disabled / visual disabled / speech & hearing disabled and has ………………………. % (………………. Percent) permanent (physical impairment visual impairment speech & hearing impairment) in relation to his / her …………………..

Note:

1. This condition is progressive / non-progressive / likely to improve / not likely to improve *
2. Re-assessment is not recommended / is recommended after a period of …………………. Month / years.*

* Strike out which is not applicable.

(Recent Attested photograph showing

The disability affixed here)

| | | |
|---|---|---|
| Sd/- | Sd/- | Sd/- |
| (Doctor) | (Doctor) | (Doctor) |
| (Seal) | (Seal) | (Seal) |

Countersigned by the Medical Superintendent CMO / Head of Hospital (with seal)

Signature / Thumb impression

Of the disabled person

downloaded from: www.kpscvaani.com

**Explanation :-** As per notification No.DPAR 50 SRR 2000 dated 03.09.2005" physically Handicapped candidates "or" person with disability " means a person suffering from less than forty percent of any of the following disabilities :- (1) Blindness (2) Low Vision (3) Hearing impairment (4) Locomotor disability (5) Leprosy cured (6) Mental retardation (7) Mental illness.

YA (1) Blindness refers to a condition where a person suffers from any of the following conditions, namely (a) Total absence of sight ; or (b) Visual acuity not exceeding 6/60 or 20/200 (Snellen) in the better eye with correcting lenses ; or (c) limitation of the field of vision subtending an angle of 20 degree or worse; (2) Person with **low vision** means a person with impairment of visual functioning even after treatment or standard refractive correction, but who uses or is potentially capable of using vision for the planning or execution of a task with appropriate assistive device of (3) **Hearing impairment** means loss of sixty decibels or more in the better ear in the conversational range of frequencies. (4) **Locomotor disability** means disability of the limbs or any form of cerebral palsy. (5) **Leprosy cured:-** means any person who has been cured of Leprosy, but is suffering from, (i) Loss of sensation in hands or feet as well as loss of sensation & paresiss in the eye & eyelid, but with no manifest deformity; (ii) manifest deformity & paresis but having sufficient mobility in their hands & feet to enable them to engage in normal economic activity; (iii) extreme physical deformity as well as advanced age which prevents him from undertaking any gainful occupation ; and the expression "Leprosy cured" shall be construed accordingly ; **(6) Mental Retardation** :- means a condition of arrested or incomplete development of mind of a person who is specially characterized by sub normality of intelligence ; (7) **Mental Illness:-** means any mental disorder other than mental retardation

downloaded from: www.kpscvaani.com

**ಹಾಲು ಉತ್ಪಾದಕರ ಸಹಕಾರಿ ಸಂಘಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು ಒಕ್ಕೂಟದ ನೇಮಕಾತಿಗಾಗಿ ಸಲ್ಲಿಸಬೇಕಾದ ಪ್ರಮಾಣಪತ್ರದ ನಮೂನೆ**

**ಪ್ರಮಾಣಪತ್ರ**

ಶ್ರೀ/ಶ್ರೀಮತಿ ______________________ ತಂದೆ/ಗಂಡ ______________________ ರವರು ________________ಹಾಲು ಉತ್ಪಾದಕರ ಸಹಕಾರಿ ಸಂಘ ನಿ.,__________ ತಾ: __________, ಜಿ: ____________, ದಲ್ಲಿ ದಿನಾಂಕ: ________________ ರಿಂದ ______________ ರವರೆಗೆ ___________ ರ ಹುದ್ದೆಯಲ್ಲಿ ಕಾರ್ಯನಿರ್ವಹಿಸಿರುತ್ತಾರೆ/ನಿರ್ವಹಿಸುತ್ತಿದ್ದಾರೆ.ಸದರಿಯವರು ಈ ಅವಧಿಯಲ್ಲಿ ಸಂಘದಲ್ಲಿ ಕಳಂಕರಹಿತವಾಗಿ ಕಾರ್ಯನಿರ್ವಹಿಸುತ್ತಾರೆ / ಕಾರ್ಯನಿರ್ವಸಿರುತ್ತಾರೆಂದು ಈ ಮೂಲಕ ದೃಢೀಕರಿಸಲಾಗಿದೆ.

**ಕಾರ್ಯದರ್ಶಿ**
**ಹಾಲು ಉತ್ಪಾದಕರ ಸಹಕಾರಿ ಸಂಘ ನಿ., ____________**
**ತಾ: ___________, ಜಿ: __________**
**(ಸಹಿ ಹಾಗೂ ಬಾರ್ ಸೀಲು)**

**ಅಧ್ಯಕ್ಷರು**
**ಹಾಲು ಉತ್ಪಾದಕರ ಸಹಕಾರಿ ಸಂಘ ನಿ.,___________**
**ತಾ: ___________, ಜಿ: __________**
**(ಸಹಿ ಹಾಗೂ ಬಾರ್ ಸೀಲು)**

ದಿನಾಂಕ :
ಸ್ಥಳ :

**"ದೃಢೀಕರಣ"**

**(ಸದರಿ ಸಂಘದ ಮೇಲ್ವಿಚಾರಣೆ ಕಾರ್ಯನಿರ್ವಹಿಸುವ ವಿಸ್ತರಣಾಧಿಕಾರಿಗಳಿಂದ)**

ಶ್ರೀ/ಶ್ರೀಮತಿ ______________________ ತಂದೆ/ಗಂಡ ______________________ ರವರು ______________ ಹಾಲು ಉತ್ಪಾದಕರ ಸಹಕಾರಿ ಸಂಘ ನಿ., __________ ತಾ: __________, ಜಿ: ____________, ದಲ್ಲಿ ದಿನಾಂಕ: ________________ ರಿಂದ ______________ ರವರೆಗೆ ___________ ರ ಹುದ್ದೆಯಲ್ಲಿ ಕಾರ್ಯನಿರ್ವಹಿಸಿರುತ್ತಾರೆ / ನಿರ್ವಹಿಸುತ್ತಿದ್ದಾರೆ.

ಸದರಿಯವರು ಈ ಅವಧಿಯಲ್ಲಿ ಸಂಘದಲ್ಲಿ ಕಳಂಕರಹಿತವಾಗಿ ಕಾರ್ಯನಿರ್ವಹಿಸುತ್ತಾರೆ / ಕಾರ್ಯನಿರ್ವಸಿರುತ್ತಾರೆಂದು ಈ ಮೂಲಕ ದೃಢೀಕರಿಸಲಾಗಿದೆ.

**(ವಿಸ್ತರಣಾಧಿಕಾರಿ ಸಹಿ, ಹೆಸರು ಹಾಗೂ ದರ್ಜೆ)**

**ಸೂಚನೆ** :1. **ಸಂಘವು ಇಲಾಖೆಯಿಂದ ನೊಂದಾಯಿತವಾದ ಬಗ್ಗೆ ರೌಂಡ್ ಸೀಲನ್ನು (ಸುತ್ತಿನ ಸೀಲು) ಕಡ್ಡಾಯವಾಗಿ ಹಾಕಬೇಕು.**

2. **ಈ ಪ್ರಮಾಣಪತ್ರವನ್ನು ಸಂಘದ ಹೆಸರಿನಲ್ಲಿ ಮುದ್ರಣಗೊಂಡ ಪತ್ರದಲ್ಲಿ (Letterhead) ಪಡೆದು ಮೂಲ ಪ್ರತಿಯನ್ನು ಸ್ಕ್ಯಾನ್ ಮಾಡಿ, ಅರ್ಜಿಯೊಂದಿಗೆ ಅಪ್‌ಲೋಡ್ ಮಾಡುವುದು**

downloaded from: www.kpscvaani.com